# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE    Vol XVII - 8    ಆಗಸ್ಟ್ 2000

### ಈ ಸಂಚಿಕೆಯಲ್ಲಿ


| | | |
|---|---|---|
| ಸಾಂಸ್ಕೃತಿಕ ಪರಂಪರೆ - ೪ | ● ಸುಮಾದ್ವಾರಕನಾಥ | 2 |
| ಶ್ರೀ ಶಿವರಾಮ ಕಾರಂತರ ಪ್ರವಾಸ ಕಥನಗಳು | ● ಗೀತಾ ಚಂದ್ರಶೇಖರ್ | 5 |
| ಗೋಡೆ ಏರಿದಳು ಹುಡುಗಿ | ● ಡಾ। ಮಂಜುನಾಥ್ | 8 |
| ಪು.ಲ. ದೇಶಪಾಂಡೆ<br>ಒಂದು ಪರಿಚಯಾತ್ಮಕ ಶ್ರದ್ಧಾಂಜಲಿ | ● ಎನ್. ಜಿ. ಸವಿಲೇಕರ್ | 10 |
| ಮಧುರಾ ಕಟ್ಟಿ | | 14 |
| ಸುತ್ತ-ಮುತ್ತ | | 15 |


The Mysore Association, Mumbai
393, Bhaudaji Road, Matunga, Mumbai-400 019.
Tel.: 402 46 47 ● Grams: "KARUNADU"

# ಸಾಂಸ್ಕೃತಿಕ ಪರಂಪರೆ - ೪

✍ ಸುಮಾದ್ವಾರಕನಾಥ

ಈಗಿನ ಕೋಲಾರ, ಬೆಂಗಳೂರು, ಮೈಸೂರು, ಮಂಡ್ಯ, ತುಮಕೂರು ಜಿಲ್ಲಾ ಪ್ರದೇಶಗಳು ಹಿಂದೆ 'ಗಂಗವಾಡಿ' ಎನಿಸಿದ್ದು 'ಗಂಗ ವಂಶ'ವು ಈ ಪ್ರದೇಶದಲ್ಲಿ ಕ್ರಿ.ಶ. ೩೫೦ರಿಂದ ೫೫೦ರ ವರೆಗೆ ಪರಮಾಧಿಕಾರಿಗಳಾಗಿಯೂ ಮುಂದೆ ಹತ್ತನೆಯ ಶತಮಾನದ ಕೊನೆಯ ವರೆಗೆ ಬಾದಾಮಿಯ ಚಾಳುಕ್ಯರ ಹಾಗೂ ರಾಷ್ಟ್ರಕೂಟದ ಮಾಂಡಲಿಕರಾಗಿಯೂ ಆಳುತ್ತಿದ್ದರು. ಆರಂಭದಲ್ಲಿ ಕೋಲಾರ, ಮುಂದೆ ತಲಕಾಡು (ಮೈಸೂರು ಜಿಲ್ಲೆ) ಕೆಲಕಾಲ ಬೆಂಗಳೂರು ಜಿಲ್ಲೆಯ 'ಮಣ್ಣೆ' ಇವರ ರಾಜಧಾನಿಗಳು. ಶಾಸನಗಳೇ ಇವರ ಇತಿಹಾಸಕ್ಕೆ ಮೂಲಾಧಾರಗಳಾದರೂ 'ಲೋಕವಿಭಾಗ' ಎಂಬ ಪ್ರಾಕೃತ ಕೃತಿ ಹಾಗೂ ಕನ್ನಡ 'ಚಾವುಂಡರಾಯ ಪುರಾಣ'ದಲ್ಲೂ ಇವರ ಕುರಿತು ಕೆಲವು ಅಂಶಗಳು ತಿಳಿಯುತ್ತವೆ. ತಮಿಳು ಶಾಸನಗಳಲ್ಲಿ ವಿಶೇಷವಾಗಿ ಗಂಗರನ್ನು 'ಕೊಂಗಣಿ ಅರಸ'ರೆಂದು ಕರೆದಿದೆ. ಅವರು ತಮ್ಮನ್ನು ಜಾಹ್ನವೇಯ ಕುಲದವರೂ ಕಾಣ್ವಾಯನ ಗೋತ್ರದವರು ಎಂದು ಕರೆದುಕೊಂಡಿದ್ದಾರೆ.

ಗಂಗರ ಮೂಲದ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಆ ಬಗ್ಗೆ ಒಬ್ಬೊಬ್ಬ ವಿದ್ವಾಂಸರೂ ತಮ್ಮದೇ ಆದ ಸಿದ್ಧಾಂತವನ್ನು ಮಂಡಿಸಿದ್ದಾರೆ. ಅನೇಕ ಶಾಸನಗಳ ಹೇಳಿಕೆಯಂತೆ ದಡಿಗ ಮತ್ತು ಮಾಧವರೆಂಬ ಸೋದರರಿಬ್ಬರು ಜೈನಗುರು ಸಿಂಹನಂದಿಯಿಂದ ದೈವದತ್ತವಾದ ಖಡ್ಗವೊಂದನ್ನು ಪಡೆದರು. ಮಾಧವನು ಆ ಖಡ್ಗದಿಂದ ಕಲ್ಲು ಕಂಭವನ್ನು ಕತ್ತರಿಸಲು ಜೈನ ಮುನಿಯು ಆತನನ್ನು ಒಬ್ಬ ರಾಜನೆಂದು ಪಟ್ಟ ಕಟ್ಟಿದನು. ಎಲ್ಲ ಕಥನಗಳಿಂದ ತಿಳಿಯುವ ಅಂಶವೆಂದರೆ ಗಂಗರು ಮೂಲತಃ ಇಕ್ಷ್ವಾಕು ವಂಶಜರು. ಕದಂಬರಂತೆ ಇವರೂ ಪಲ್ಲವ ಸತ್ತೆಯನ್ನು ಪ್ರತಿಭಟಿಸಿ ಸ್ವತಂತ್ರರಾದರು. ದಡಿಗನೇ ಈ ವಂಶದ ಮೊದಲನೆಯ ರಾಜ ಅವನಿಗೆ ಕೊಂಗಣಿವರ್ಮ ಎಂಬ ಹೆಸರೂ ಇತ್ತು. ಈತನ ಕಾಲ ಸುಮಾರು ಕ್ರಿ.ಶ. ೩೫೦ ಎಂದು ಹೇಳಬಹುದು. ಇವನ ನಂತರ ಮಾಧವನು ರಾಜನಾದನು. ಗಂಗರಾಜ್ಯ ನೆಲೆಯೂರುವಂತೆ ಮಾಡಲು ವಿಶೇಷವಾಗಿ ಶ್ರಮಿಸಿದವನು ಈತ. ಇವನ ನಂತರ ಹರಿವರ್ಮ, ವಿಷ್ಣುಗೋಪ, ೨ನೇ ಮಾಧವ, ಅವನೀತರು ಆಳಿದರು. ಅನಂತರ ಬಂದವನೇ ದುರ್ವಿನೀತ. ಈತನ ಕಾಲ ೫೪೦ರಿಂದ ೬೦೦ ಎನ್ನಬಹುದು. ಅದು ಬಾದಮಿಯ ಚಾಲುಕ್ಯರು ಪ್ರಬಲರಾಗುತ್ತಿದ್ದ ಕಾಲ. ೨ನೇ ಪುಲಕೇಶಿಗೆ ಈತನು ಮಂತ್ರಾಲೋಚನೆ ಯನ್ನೀಯುವ ಹಿತ ಚಿಂತಕನಾಗಿದ್ದಂತೆ ತೋರುತ್ತದೆ. ಅಲ್ಲದೆ ಆತನಿಗೆ ತನ್ನ ಮಗಳನ್ನು ಮದುವೆ ಮಾಡಿ ಕೊಟ್ಟಿದ್ದಂತೆಯೂ ತಿಳಿದು ಬರುತ್ತದೆ. ಈ ವಂಶದ ರಾಜರುಗಳಲ್ಲೆಲ್ಲಾ ಬಹಳ ಪ್ರಮುಖನಾದವನು ಈತ.

ಈತನು ಮಹಾ ಸಾಹಿಸಿಯಾಗಿದ್ದುದಲ್ಲದೆ ವಿವೇಚನಾ ಪರನೂ, ಸಚ್ಛೀಲ ಸಮನ್ವಿತನೂ ಧರ್ಮಿಷ್ಠನೂ ಆಗಿದ್ದನು ಎಂದು ಶಾಸನದಲ್ಲಿ ಈತನನ್ನು ಧರ್ಮರಾಯನಿಗೆ ಹೋಲಿಸಲಾಗಿದೆ. ಪ್ರಭುಶಕ್ತಿ, ಮಂತ್ರಶಕ್ತಿ ಮತ್ತು ಉತ್ಸಾಹ ಶಕ್ತಿಗಳ ಸಂಗಮ ಈತನಲ್ಲಿತ್ತೆಂದು ಇನ್ನೊಂದು ಶಾಸನ ಹೇಳುತ್ತದೆ. ಈತನು ದೂರ ದೃಷ್ಟಿಯುಳ್ಳವನೂ ದೀನ ದುಃಖಿಗಳಲ್ಲಿ ದಯಾಮಯನೂ, ಯುದ್ಧದಲ್ಲಿ ಭಯಂಕರನೂ ನಡೆನುಡಿಯಲ್ಲಿ ಸುಸಂಸ್ಕೃತನೂ, ಕಲಾಭಿರುಚಿಯಲ್ಲಿ ಸಹೃದಯನೂ ಆಗಿದ್ದವನು ದುರ್ವಿನೀತ. ಇದಲ್ಲದೆ ಸಂಸ್ಕೃತ, ಪ್ರಾಕೃತ, ಕನ್ನಡಗಳಲ್ಲಿ ದೊಡ್ಡ ಪಂಡಿತನಾಗಿದ್ದನು. ನೃಪತುಂಗ ತನ್ನ 'ಕವಿರಾಜ ಮಾರ್ಗ'ದಲ್ಲಿ ಕನ್ನಡ ಗದ್ಯ ಕವಿಗಳ ಸಾಲಿನಲ್ಲಿ ಈತನನ್ನು ಸೇರಿಸಿದ್ದಾನೆ.

ವಿಮಲೋದಯ ನಾಗಾರ್ಜುನ<br>
ಸಮೇತ ಜಯಬಂಧು ದುರ್ವಿನೀತಾದಿಗಳೀ<br>
ಕ್ರಮದೊಳ್ ನೆಗೞ್ಚುಗದ್ಯಾ<br>
ಶ್ರಮಪದ ಗುರುತಾ ಪ್ರತೀತಿಯಂ ಕೆಯ್ಕೊಂಡರ್ ॥

ಒಟ್ಟಿನಲ್ಲಿ ಅತ್ಯಂತ ಗೌರವಾನ್ವಿತ ಸ್ಥಾನವನ್ನು ಪಡೆದಿರುವ ದಕ್ಷಿಣ ಇಂಡಿಯಾದ ರಾಜರುಗಳಲ್ಲಿ ಒಬ್ಬನೆಂದು ದುರ್ವಿನೀತನನ್ನು ಹೇಳಬಹುದು.

ಶ್ರೀ ಪುರುಷ, ಶಿವಮಾರ, ಮಾರಸಿಂಹ, ರಾಚಮಲ್ಲ ಮೊದಲಾದ ರಾಜರುಗಳು ಈ ವಂಶದ ಕೀರ್ತಿಯನ್ನು ಹೆಚ್ಚಿಸಿದವರು. ಮಾರಸಿಂಹ ಮತ್ತು ನಾಲ್ಕನೇ ರಾಚಮಲ್ಲ ಇವರ ಆಳ್ವಿಕೆಯಲ್ಲಿ ಕರ್ನಾಟಕದ ಕೀರ್ತಿಯನ್ನು ಶಾಶ್ವತವಾಗಿ ಉಳಿಸುವಂತಹ ಮಹತ್ಕಾರ್ಯವೊಂದಕ್ಕೆ ಈ ವಂಶ ಕಾರಣವಾಯಿತು. ಅದೆಂದರೆ ಶ್ರವಣ ಬೆಳಗೊಳದಲ್ಲಿ ಗೋಮಟೇಶ್ವರನ ಬೃಹತ್ ವಿಗ್ರಹ ನಿರ್ಮಾಣ.

(೯೭೪- ೯೮೪) ಮಾರಸಿಂಹ, ರಾಚಮಲ್ಲರ ಬಳಿಯಲ್ಲಿ ದಂಡ ನಾಯಕನಾಗಿದ್ದ ಚಾವುಂಡರಾಯ ಇದಕ್ಕೆ ಕಾರಣನಾದನು. ಅಸಮಸಾಹಸ ಮತ್ತು ಏಕೈಕ ಸ್ವಾಮಿ ನಿಷ್ಠೆಯ ಜೊತೆಗೆ ಅಗಾಧವಾದ ಪಾಂಡಿತ್ಯ, ಕಾವ್ಯ ಶಕ್ತಿ, ಕಲೋಪಾಸನೆಗಳು ಆತನಲ್ಲಿ ಸೇರಿದ್ದವು. ರನ್ನ ಕವಿಗೆ ಕೆಲವುಕಾಲ ಆಶ್ರಯವನ್ನು ಕೊಟ್ಟ ಹಿರಿಮೆ ಆತನದು. ಅದಲ್ಲದೆ ತಾನೇ ಸ್ವತಃ ಕೃತಿಕಾರನಾಗಿ ಚಾವುಂಡ ರಾಯ ಪುರಾಣ' ವೆಂಬ ಗ್ರಂಥವನ್ನು ಬರೆದನು. ಎಲ್ಲಕ್ಕಿಂತ ಮಿಗಿಲಾಗಿ ಅವನ ಹೆಸರನ್ನು ಅಮರಗೊಳಿಸಿದ ಮಹತ್ಕಾರ್ಯವೆನೆ ಗೊಮ್ಮಟೇಶ್ವರನ ವಿಗ್ರಹ ನಿರ್ಮಾಣ. ಇದರ ಹಿರಿಮೆಯನ್ನು ಸಾವಿರ ವರ್ಷಗಳಿಂದ ಹೆಚ್ಚಿಸಿದ ಈ ವಂಶದ ಉನ್ನತಿಯ ತುತ್ತ ತುದಿ ಇದು. ಇಲ್ಲಿಂದ ಮುಂದೆ ಅಂದರೆ ರಾಚಮಲ್ಲನ ಅನಂತರ ರಕ್ಕಸ ಗಂಗನ ಕಾಲದಿಂದಲೇ ಈ ವಂಶ ಇಳಿಮುಖವಾಯಿತೆನ್ನಬಹುದು.

ಆಡಳಿತ ವ್ಯವಸ್ಥೆ : ಪ್ರಜೆಗಳ ಹಿತವೇ ತಮ್ಮ ಹಿತವೆಂದು ಗಂಗರು ಮನಗಂಡಿದ್ದರು. ಧರ್ಮ ಶಾಸ್ತ್ರ, ನೀತಿಶಾಸ್ತ್ರ ಮತ್ತು ರಾಜನೀತಿ ಶಾಸ್ತ್ರದ ತತ್ವಗಳನ್ನು ಅನುಷ್ಠಾನದಲ್ಲಿ ತಂದಿದ್ದರು. ಧಾರ್ಮಿಕ ಹಾಗೂ ಸಾಂಪ್ರದಾಯಿಕ ನಿಯಮಗಳು ರಾಜನ ಅಧಿಕಾರವನ್ನು ನಿಯಂತ್ರಿಸಿದ್ದವು. ಮಂತ್ರಿ ಮಂಡಲ ರಾಜ್ಯಾಡಳಿತದ ಪ್ರಮುಖ ಅಂಗವಾಗಿತ್ತು. ಪ್ರಧಾನ ಮಂತ್ರಿ ಯುವರಾಜ, ದಂಡನಾಯಕ, ವಿದೇಶಾಂಗ ಮಂತ್ರಿ, ಮಹಾಪ್ರಧಾನ ಮುಂತಾದವರು ಮಂತ್ರಿ ಮಂಡಲದ ಪ್ರಮುಖರು. ವಿವಿಧ ಆಡಳಿತ ಶಾಖೆಗಳ ಅಧಿಕಾರಿಗಳ ಮೇಲ್ವಿಚಾರಣೆ ಮಂತ್ರಿಗಳ ಜವಾಬ್ದಾರಿಯಾಗಿತ್ತು. ರಾಜುಕ, ರಹಸ್ಯಾಧಿಕ ಮತ್ತು ಲೇಖಕನೆಂಬ ಅಧಿಕಾರಿಗಳು ಅರಸನ ನಿಕಟವರ್ತಿಗಳಾಗಿದ್ದು ಕೆಲವು ತುರ್ತು ಸಮಸ್ಯೆಗಳ ಬಗ್ಗೆ ಸಮಾಲೋಚನೆ ನಡೆಸುತ್ತಿದ್ದರು.

ಪ್ರಾಂತ್ಯಾಧಿಕಾರಿಗಳು ತಮ್ಮದೇ ಆದ ಸೈನ್ಯ ಹೊಂದಿದ್ದು ಅವಶ್ಯಕವಾದಲ್ಲಿ ಯುದ್ಧ ಹೂಡುವ ಸ್ವಾತಂತ್ರ್ಯ ಪಡೆದಿದ್ದರು. ಇದು ಗಂಗರ ಆಡಳಿತ ವ್ಯವಸ್ಥೆಯಲ್ಲಿನ ಒಂದು ನ್ಯೂನತೆ ಎನ್ನಬಹುದು. ಏಕೆಂದರೆ ಕೇಂದ್ರದಲ್ಲಿ ಅಸಮರ್ಥ'ರು ಅಧಿಕಾರದಲ್ಲಿದ್ದಾಗ ಪ್ರಬಲ ಪ್ರಾಂತ್ಯಾಧಿಕಾರಿಗಳು ತಮಗಿದ್ದ ಸೈನ್ಯದ ಸ್ವಾತಂತ್ರ್ಯ ಉಪಯೋಗಿಸಿಕೊಂಡು ಅರಸರನ್ನೇ ವಿರೋಧಿಸಬಹುದಾದ ಸಾಧ್ಯತೆ ಇದ್ದಿತು. ಪ್ರಾಂತಗಳನ್ನು ನಾಡು, ಕಂಪಣ, ಗ್ರಾಮ ಎಂಬುದಾಗಿ ವಿಂಗಡಿಸಲಾಗಿತ್ತು. ರಾಷ್ಟ್ರಪತಿ, ವಿಷಯಪತಿ ಎಂಬ ಅಧಿಕಾರಿಗಳು ಆಡಳಿತವನ್ನು ನಿರ್ವಹಿಸುತ್ತಿದ್ದರು. ತೆರಿಗೆ ವಸೂಲಿ, ನ್ಯಾಯ ತೀರ್ಮಾನ, ಗ್ರಾಮನೈರ್ಮಲ್ಯ ಹಾಗೂ ರಕ್ಷಣೆ ಗ್ರಾಮ ಸಭೆಗಳ ಮುಖ್ಯ ಕಾರ್ಯವಾಗಿದ್ದಿತು. ವಿದ್ಯಾಕೇಂದ್ರಗಳು, ಸಾರ್ವಜನಿಕ ಉದ್ಯಾನವನಗಳು, ವಿಶಾಲವಾದ ರಸ್ತೆಗಳು ನಗರಗಳಲ್ಲಿ ವ್ಯಾಪಕವಾಗಿದ್ದವು.

ಪ್ರತಿಯೊಂದು ನಗರದ ಆಡಳಿತವನ್ನು ಪುರಸಭೆ ನಿರ್ವಹಿಸಿತ್ತು. ಪುರಸಭೆಯ ಪ್ರಮುಖ ಅಧಿಕಾರಿಗಳು. ನಗರೀಕ, ಮೇಯರ್ ಮತ್ತು ಪ್ರತಿನಿಧಿಗಳು,ನಗರೀಕ ಎಂಬುವನು ಪೋಲೀಸ್ ಇಲಾಖೆಯ ಮುಖ್ಯಸ್ಥ ನಗರ ರಕ್ಷಣೆ ಇವನ ಜವಾಬ್ದಾರಿಯಾಗಿತ್ತು.

ಭೂಕಂದಾಯವೇ ಮುಖ್ಯ ರಾಜಾದಾಯ ಗಂಗಕೋಲು, ಭೇರುಂಡ ಕೋಲು ಮುಂತಾದ ಭೂಮಾಪನ ದಂಡಗಳ ಉಲ್ಲೇಖವೂ ಶಾಸನಗಳಲ್ಲಿ ಇವೆ. ಕಸುಬುಗಳ ಮೇಲೆ ವೃತ್ತಿ ತೆರಿಗೆ, ಮಾರಾಟ ತೆರಿಗೆ, ಸಂತೆಗಳಲ್ಲಿ ಸುಂಕ (ಪಣ್ಣಾಯ) ಇತರ ಕರಗಳು, ಮನೆತೆರಿಗೆ, ಕಾವಲು ತೆರಿಗೆ (ಹುಲ್ಲುಗಾವಲು) ಮದುವೆಯ ಮೇಲೆ ಕೂಡ ಸುಂಕ ಇದ್ದುವು.

ರಾಜನೇ ಉಚ್ಚನ್ಯಾಯಾಧೀಶ. ನ್ಯಾಯದ ಪೂರ್ಣ ಅಧಿಕಾರ ಅರಸನದೇ ಆಗಿದ್ದರೂ ಯಾವ ಪ್ರಲೋಭನೆಗಳಿಗೂ ಒಳಗಾಗದಂತೆ ಎಚ್ಚರಿಕೆ ವಹಿಸಿದ್ದನು. ನ್ಯಾಯವಿತರಣೆ ಕಾರ್ಯದ ಸುಲಭ ಸಾಧ್ಯತೆಗಾಗಿ ಧರ್ಮಾಧ್ಯಕ್ಷ ಮತ್ತು ರಾಜಾಧ್ಯಕ್ಷರೆಂಬ ನ್ಯಾಯಾಧೀಶರನ್ನು ರಾಜನೇ ನೇಮಕಮಾಡಿ ಕೊಳ್ಳುತ್ತಿದ್ದನು. ಶಿಕ್ಷೆಗಳು ಕಠಿಣವಾಗಿದ್ದು ರಾಜ್ಯದಲ್ಲಿ ಸುಭದ್ರ ಸರಕಾರ ಸ್ಥಾಪನೆ ಸುಲಭ ಸಾಧ್ಯವಾಗಿತ್ತು.

'ಗಜಸಾಹನಿ', ತುರಗಸಾಹನಿ ಅಥವಾ ಅಶ್ವಾಧ್ಯಕ್ಷಮುಂತಾದ ಸೇನಾಧಿಕಾರಿಗಳ ಉಲ್ಲೇಖವೂ ಶಾಸನಗಳಲ್ಲಿದೆ. ಯುದ್ಧದಲ್ಲಿ ಸತ್ತವರ ಕುಟುಂಬಗಳಿಗೆ ನೆತ್ತರು ಕೊಡುಗೆಯೆಂಬ ಭೂ ದಾನ ನೀಡುತ್ತಿದ್ದರು.

ಗಂಗರು ಸುಮಾರು ಆರು ಶತಮಾನಗಳಿಗೂ ಹೆಚ್ಚು ಕಾಲ ಕರ್ನಾಟಕದಲ್ಲಿ ಆಳ್ವಿಕೆ ನಡೆಸಿದರು. ಕರ್ನಾಟಕವನ್ನು ಏಕಸೂತ್ರದಲ್ಲಿಡುವ ಪ್ರಯತ್ನ ಇವರದಾಗಿತ್ತು. ಈ ಅವಧಿಯಲ್ಲಿ ಕರ್ನಾಟಕದ ಸಂಸ್ಕೃತಿ ವಿಪುಲವಾಗಿ ಬೆಳೆಯಲು ಬೇಕಾದ ಎಲ್ಲಾ ಸೌಲಭ್ಯವನ್ನು ಒದಗಿಸಿಕೊಟ್ಟು ಇತರರಿಗೆ ಮಾರ್ಗ ತೋರಿದ್ದಾರೆ.

### ಸಾಂಸ್ಕೃತಿಕ ಕೊಡುಗೆ ಧರ್ಮ

ಜೈನ ಮತ್ತು ವೈದಿಕ ಸಂಪ್ರದಾಯಗಳೆರಡು ರಾಜ್ಯದಲ್ಲಿ ಪ್ರಬಲವಾಗಿದ್ದವು. ಬೌದ್ಧ ಸಂಪ್ರದಾಯಕ್ಕೆ ರಾಜಾಶ್ರಯವಿದ್ದರೂ ಅದು ಮರೆಯಾಗುತ್ತ ಬಂದಿತ್ತು. ಜನರಿಗೆ ಧಾರ್ಮಿಕ ಸ್ವಾತಂತ್ರ್ಯವಿದ್ದಿತು. ಕಾಳಾಮುಖ ಹಾಗೂ ಲೋಕಾಯುತ (ಚಾರ್ವಾಕ) ಪಂಥಗಳೂ ರಾಜ್ಯದಲ್ಲಿ ಇದ್ದವು.

ಶಿಕ್ಷಣ : ಅಗ್ರಹಾರಗಳು, ಧಾರ್ಮಿಕ ಮಠಗಳು, ಜೈನರ ಚೈತ್ಯಾಲಯಗಳು ವಿದ್ಯಾರ್ಜನೆಯ ಪ್ರಮುಖ

## PROGRAMMES FOR THE MONTH OF AUGUST – SEPTEMBER

| | | |
|---|---|---|
| 15th August 2000 | | Independence Day<br>Flag hoisting at 10-00 a.m. |
| 19th August 2000 | | Screening of Kannada Film at 6-30 p.m.<br>Followed by contributory dinner<br>Adult Rs. 25/- Children (below 10 yrs) Rs. 15/-<br>Please come with family & friends and spend an enjoyable evening. |
| 1st to 10th Sept. 2000 | | Shree Swarna Gowri & Shree Mahaganapathi Pooja Mahotsav – 2000 |
| Friday 1st Sept. 2000 | 9-00 a.m. | Swarna Gowri Pooja |
| | 10-00 a.m. | Shree Mahaganapathi Pratishtapane & Pooja |
| | 8-00 p.m. | Arati |
| Saturday 2nd Sept. 2000 | 9-30 a.m. | Pooja |
| | 7-00 p.m. | Cultural Programme |
| | 9-00 p.m. | Arati |
| Monday 4th Sept. 2000 | 9-30 a.m. | Pooja |
| | 7-00 p.m. | Cultural Programme |
| | 9-00 p.m. | Arati |
| Tuesday 5th Sept. 2000 | 9-00 a.m. | Pooja |
| | 7-00 p.m. | Cultural Programme |
| | 9-00 p.m. | Arati |
| Wed. 6th Sept. 2000 | 9-00 a.m. | Pooja |
| | 7-00 p.m. | Cultural Programme |
| | 9-00 p.m. | Arati |
| Thursday 7th Sept. 2000 | 9-00 a.m. | Pooja |
| | 7-00 p.m. | Cultural Programme |
| | 9-00 p.m. | Arati |
| Friday 8th Sept. 2000 | 9-00 a.m. | Pooja |
| | 6-00 p.m. | Arashina Kumkuma |
| | 7-00 p.m. | Cultural Programme |
| | 9-00 p.m. | Arati |
| Saturday 9th Sept. 2000 | 9-30 a.m. | Arati |
| | 7-00 p.m. | Cultural Programme |
| | 9-00 p.m. | Arati |
| Sunday 10th Sept. 2000 | 9-30 a.m. | Pooja |
| | 10-00 a.m. | Veda Ghosha by Vaidikas of Sri Shankar Muttam |
| | 11-00 a.m. | Cultural Programme |
| | 12-30 p.m. | Maha Mangalarati, Procession, Visarjana & Prasada Viniyoga |

Grand Music Festival has been organised as part of the cultural activity during this festival. Well known artists as well as young and upcoming talents both from Karnataka and Maharashtra will be participating in this week long festival which will commence from 3rd September and conclude on 10th September. The Festival will feature musicians from both Karnataka and Hindustani traditions. Do not miss this rare opportunity. A separate programme card giving the details of the festival is being mailed to all members.

ಕೇಂದ್ರಗಳಾಗಿದ್ದುವು. ಅಗ್ರಹಾರಗಳಲ್ಲಿ ಭೂಮಿಯನ್ನು ಉಂಬಳಿ ಪಡೆದ ಬ್ರಾಹ್ಮಣರು ತಮ್ಮ ಶಿಷ್ಯರಿಗೆ ವೇದ, ಪುರಾಣ ಸ್ಮೃತಿಗಳನ್ನು ಭೋದಿಸುತ್ತಿದ್ದರು. ಆದರೆ ಇದು ಲಭ್ಯವಾಗುತ್ತಿರಲಿಲ್ಲ. ಧಾರ್ಮಿಕ ಮಠಗಳು ಬಡವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡುತ್ತಿದ್ದವು.

**ಸಾಹಿತ್ಯ :** ಕ್ರಿ.ಶ. ೯.೧೦ನೇ ಶತಮಾನದವರೆಗಿನ ಬಹುತೇಕ ಶಾಸನಗಳು ಕನ್ನಡದಲ್ಲಿವೆ. ದುರ್ವಿನೀತ ಪ್ರಾಕೃತದಲ್ಲಿನ ಗುಣಾಢ್ಯನ 'ಬಡ್ಡ ಕಥಾ' ಅಥವಾ 'ಬೃಹತ್ಕಥಾ'ವನ್ನು ಸಂಸ್ಕೃತಕ್ಕೆ ಭಾಷಾಂತರಿಸಿದ್ದಾನೆ.

ಶ್ರೀ ಪುರುಷ 'ಗಜಶಾಸ್ತ್ರ'ವನ್ನು ಬರೆದಿದ್ದಾನೆ. 'ಶಬ್ದಾವತಾರ ' ಎಂಬ ಸಂಸ್ಕೃತ ವ್ಯಾಕರಣ ಗ್ರಂಥ ಲೇಖಕ ಪೂಜ್ಯಪಾದರು ದುರ್ವಿನೀತನಿಂದ ಗೌರವಿತನಾಗಿದ್ದು ಈ ಕೃತಿಯು ಜೈನೇಂದ್ರ ವ್ಯಾಕಾರಣವೆಂಬ ಪರಂಪರೆಯ ಸೃಷ್ಟಿಗೆ ಕಾರಣವಾಯಿತು. 'ರಾಘವ ಪಾಂಡವೀಯ' ವೆಂಬ ದ್ವಯಾರ್ಥದ (ರಾಮ ಹಾಗೂ ಪಾಂಡವರ ಕತೆಯನ್ನು ಒಟ್ಟಾಗಿ ಹೇಳುವ) ಕೃತಿಯ ರಚನೆಕಾರ ಹೇಮಸೇನನು ಬೂತುಗ II ನಿಂದ ಪುರಸ್ಕೃತನೆಂದು ಡಾ। ಎ. ವೆಂಕಟಸುಬ್ಬಯ್ಯ ಅವರ ಅಭಿಪ್ರಾಯ. ಒಂದನೆಯ ನಾಗವರ್ಮ ರಕ್ಕಸಗಂಗನಿಂದ ಆಶ್ರಿತನಾಗಿ 'ಕರ್ಣಾಟಕ ಕಾದಂಬರಿ' ಎಂಬ ಬಾಣನ 'ಕಾದಂಬರಿ'ಯನ್ನು ಭಾಷಾಂತರ ಮಾಡಿದ. ಒಂದನೆಯ ಗುಣವರ್ಮನು ನೀತಿ ಮಾರ್ಗ II ನಿಂದ ಆಶ್ರಿತನಾಗಿ 'ಶೂದ್ರಕ', ಹರಿವಂಶಗಳನ್ನು ಬರೆದಿದ್ದು ಈ ಕೃತಿಗಳ ಕೆಲವು ಸಾಲುಗಳನ್ನಷ್ಟೇ ಅಲ್ಲ ಇಲ್ಲಿ ಕಾಣಬಹುದಾಗಿದೆ.

**ಲಲಿತ ಕಲೆ :** ನೃತ್ಯ, ಸಂಗೀತ ಮೊದಲಾದ ಲಲಿತಕಲೆಗಳಲ್ಲಿ ಅರಸು ಮನೆತನದವರೇ ಅಲ್ಲದೆ ಸಾರ್ವಜನಿಕರೂ ಅಭ್ಯಸಿಸಬಹುದಿತ್ತು. ಅರಸರು ಹಾಗೂ ಮಹಾರಾಣಿಯರು ವಿಶೇಷ ನೃತ್ಯ ಸಂಗೀತಗಳಿಗೆ ಪ್ರೋತ್ಸಾಹ ನೀಡಿದ್ದರು. ಸ್ತ್ರೀಪುರುಷರೂ ಸಮಾನರಾಗಿ ಅದರ ಅಭ್ಯಾಸ ಮಾಡುತ್ತಿದ್ದರು. ಗಂಗರಾಜ್ಯದ ಪ್ರಮುಖ ನರ್ತಕಿ ಬಾಚಲದೇವಿ 'ನೃತ್ಯ ವಿಶಾರದೆ'ಯಾಗಿದ್ದಳಂತೆ. ಅವಳ ನೃತ್ಯದ ಚಾಕಚಕ್ಯತೆಗೆ ಮಾರುಹೋಗಿದ್ದ ಅರಸ ಅವಳಿಗೆ 'ಪಾತ್ರ ಜಗದವಳೆ' ಎಂಬ ಬಿರುದು ಕೊಟ್ಟ ಸಂಗತಿಯನ್ನು ಶಾಸನದಲ್ಲಿ ಹೇಳಿ ಕೊಳ್ಳಲಾಗಿದೆ.

### ಕಲೆ ಮತ್ತು ವಾಸ್ತು ಶಿಲ್ಪ

ಗಂಗವಾಡಿಯು ಪಲ್ಲವರ ಆಡಳಿತಕ್ಕೆ ಹಿಂದೆ ಒಳಪಟ್ಟಿದ್ದುದರಿಂದ ಗಂಗರ ಅನೇಕ ವಾಸ್ತುಗಳು ಪಲ್ಲವರ ಶೈಲಿಯಿಂದ ಪ್ರಭಾವಿತವಾಗಿವೆ. ಕಂಬಗಳ ಬುಡದಲ್ಲಿರುವ ಸಿಂಹವು ಪಲ್ಲವರ ಶೈಲಿಯ ಕುರುಹಾಗಿದೆ.

ಮಣ್ಣೆಯ ಕಪಿಲೇಶ್ವರ, ವರುಣದ ಮಹಾಲಿಂಗೇಶ್ವರ, ತಲಕಾಡುವಿನ ಪಾತಾಳೇಶ್ವರ ಹಾಗೂ ಮರುಳೇಶ್ವರ, ಕೋಲಾರದ ಕೋಲಾರಮ್ಮನ ಮಂದಿರ, ಬೇಗೂರು ನಾಗೇಶ್ವರ, ನಂದಿಯಲ್ಲಿರುವ ಜೋಗನಂದೀಶ್ವರ, ನರಸಮಂಗಲದ ವಿಷ್ಣು, ಶಿವದೇವಾಲಯಗಳು ಪ್ರಮುಖವಾಗಿವೆ. ಸಮೀಪದ ಕಂಬದ ಹಳ್ಳಿಯಲ್ಲಿ ಪಂಚಕೂಟ ಬಸದಿ ಇದೆ. ಈ ಕಾಲದಲ್ಲಿ ಸರಸ್ವತಿ, ಲಕ್ಷ್ಮೀ, ವಿಷ್ಣು, ಬುದ್ಧ, ಮಹಾವೀರ, ಯಕ್ಷ ಹಾಗೂ ಯಕ್ಷಿಯರ ವಿಗ್ರಹಗಳು ಅಧಿಕ ಸಂಖ್ಯೆಯಲ್ಲಿ ನಿರ್ಮಿತವಾಗಿವೆ.

ಗಂಗಶಿಲ್ಪದ ಭವ್ಯ ಉದಾಹರಣೆ ಶ್ರವಣ ಬೆಳಗೊಳದ ಗೋಮಟಮೂರ್ತಿ, ಬಿಳಿಯ ಬೆಣಚು ಕಲ್ಲಿನ ಈ ಮೂರ್ತಿ ಕಮಲದಲ್ಲಿ ನಿಂತಂತೆ ಕೆತ್ತಲ್ಪಟ್ಟಿದ್ದು ೫೭ ಅಡಿಗೂ ಎತ್ತರವಾಗಿದೆ. ಮುಖವು ಆರೂವರೆ ಅಡಿ ಉದ್ದ. ಗಂಭೀರ ಮಂದಹಾಸದ ಮುಖಮುದ್ರೆಯ ಈ ಮೂರ್ತಿ ಒಂದು ಭವ್ಯ ಕಲಾಕೃತಿ. ನಿಂತ ಭಂಗಿಯಲ್ಲಿರುವ ಈ ವಿಗ್ರಹ ಪ್ರಪಂಚದಲ್ಲೇ ಅದ್ವಿತೀಯವಾದುದಾಗಿದೆ.

ಗೊಮ್ಮಟ ವಾಸ್ತವವಾಗಿ ಬಾಹುಬಲಿ ಎಂಬ ರಾಜಕುಮಾರ. ಬಾಹುಬಲಿ, ಭರತ ಚಕ್ರವರ್ತಿಯ ತಮ್ಮ. ಭರತನು ಇಡೀ ವಿಶ್ವವನ್ನು ಗೆದ್ದು, ತಮ್ಮನಾದ ಬಾಹುಬಲಿಯೂ ತನಗೆ ಅಡಿಯಾಳಾಗಬೇಕೆಂದು ಬಯಸುತ್ತಾನೆ. ತನ್ನ ತಂದೆಯಿಂದ ಬಂದ ರಾಜ್ಯವನ್ನು ತನ್ನಷ್ಟಕ್ಕೆ ತಾನು ಆಳಿಕೊಂಡಿದ್ದ ಬಾಹುಬಲಿಗೆ ತನ್ನ ಅಣ್ಣನ ಅಡಿಯಾಳಾಗಿ ಇರಲು ಬಯಕೆ ಬರಲಿಲ್ಲ. ಕಾಲು ಕೆರೆದು ಯುದ್ಧಕ್ಕೆ ಬಂದ ಭರತನನ್ನು ಆ ಸ್ವಾಭಿಮಾನಿ ಸುಲಭವಾಗಿ ಸೋಲಿಸಿ ವಿಜಯಿಯಾಗುತ್ತಾನೆ. ಆ ವಿಜಯದ ತುತ್ತ ತುದಿಯಲ್ಲಿಯೇ ಅವನಿಗೆ ವೈರಾಗ್ಯೋದಯವಾಗಿ ಅಣ್ಣನಿಂದ ಗೆದ್ದುಕೊಂಡಿದ್ದ ಇಡೀ ಭೂ ಮಂಡಳವನ್ನು ಅಣ್ಣನಿಗೆ ಒಪ್ಪಿಸಿ ತಾನು ಸನ್ಯಾಸಿಯಾಗುತ್ತಾನೆ. ತ್ಯಾಗ ಗುಣದ ಪರಕಾಷ್ಠೆಯನ್ನು ಮೆರೆಯುತ್ತಾನೆ. ಬಾಹುಬಲಿಯೇ ಗೊಮ್ಮಟ ಸ್ವಾಮಿ.

''ಪ್ರಾಚೀನ ಕರ್ನಾಟಕದ ಮೂರ್ತಿ ಶಿಲ್ಪದ ಕ್ಷೇತ್ರದ ಅತ್ಯಂತ ಭವ್ಯ ಸಾಧನೆಗಳಲ್ಲಿ ಒಂದು'' ಎಂದು ಡಾ। ಎಂ. ಶೇಷಾದ್ರಿ ಅದನ್ನು ಕರೆದಿದ್ದಾರೆ. ಗಂಗರ ಕಾಲದ, ಮೇಲಕ್ಕೆ ಆಧಾರವಿಲ್ಲದ ಮಾನಸ್ತಂಭ, ಬ್ರಹ್ಮಸ್ತಂಭಗಳು ಇನ್ನೊಂದು ಉಲ್ಲೇಖನೀಯ ರಚನೆ. ಇವುಗಳನ್ನು ನಿಲ್ಲಿಸಿದ ವಿಧಾನಗಳ ಬಗ್ಗೆ ಫರ್ಗುಸನ್‌ರಂಥ ಪಾಶ್ಚಾತ್ಯ ಕಲಾವಿಮರ್ಶಕರು ಅಚ್ಚರಿಪಟ್ಟಿದ್ದಾರೆ. ಸದಭಿರುಚಿಯ ರಚನೆಗಳಿಗೆ ಇದಕ್ಕೆ ಸಮಾನವಾದುದು ಇಡೀ ಭಾರತದ ಕಲಾರಂಗದಲ್ಲಿಯೇ ಇನ್ನೊಂದಿಲ್ಲ' ಎಂದು ಈ ಕಂಭಗಳ ಸುಂದರ ಅಲಂಕಾರಗಳನ್ನು ನೋಡಿ ಡಾ॥ ವಿನ್ಸೆಂಟ್ ಸ್ಮಿತ್ ಅಂದಿರುವರು. 'ಗುಳಕಾಯಜ್ಜಿ' ಎಂದು ಪರಿಚಿತವಾದ ಶ್ರವಣ ಬೆಳಗೊಳದಲ್ಲಿರುವ ಒಂದು ಯಕ್ಷಿಯ ಉಬ್ಬು ಶಿಲ್ಪ ಗಂಗರ ಭವ್ಯ ಶಿಲ್ಪ ಸಾಧನೆಗೊಂದು ಗಣ್ಯ ಉದಾಹರಣೆ.

ಹೀಗೆ ಗಂಗವಂಶ ತನ್ನ ಇತಿಮಿತಿಗಳನ್ನರಿತು ಹಿತಕರವಾದ ರೀತಿಯಲ್ಲಿ ರಾಜ್ಯಭಾರ ಮಾಡಿತು. ಇಡೀ ಕರ್ಣಾಟಕವನ್ನೆಲ್ಲಾ ತಾನು ವ್ಯಾಪಿಸಬೇಕೆಂದು ಮಹತ್ವಾಕಾಂಕ್ಷೆಯನ್ನು ಯಾವ ಕಾಲದಲ್ಲೂ ಇದು ಬೆಳಸಿಕೊಳ್ಳಲಿಲ್ಲ. ಗಂಗವಾಡಿಯಷ್ಟರಿಂದಲೇ ತೃಪ್ತವಾಗಿ ನಿಷ್ಠೆಯಿಂದ ಪ್ರಜಾಪರಿಪಾಲನೆಯನ್ನು ಮಾಡಿತು. ಪ್ರಧಾನವಾಗಿ ಜೈನ ಮತದ ಕಡೆಗೆ ಅದರ ಒಲವಿದ್ದರೂ ಪರಮತ ಸಹಿಷ್ಣುತೆಯನ್ನು ತನ್ನ ಆದರ್ಶವನ್ನಾಗಿಟ್ಟುಕೊಂಡಿತು. ದುರ್ವಿನೀತನಂತಹ ರಾಜನನ್ನೂ, ಚಾವುಂಡರಾಯನಂತಹ ದಂಡನಾಯಕನನ್ನೂ, ರನ್ನನಂತಹ ಕವಿಯನ್ನೂ ಪಡೆದ ಈ ವಂಶ ಕರ್ನಾಟಕದ ಚರಿತ್ರೆಯಲ್ಲಿ ತನ್ನದೇ ಆದ ಒಂದು ಅಧ್ಯಾಯವನ್ನು ಸೇರಿಸಲು ಸಮರ್ಥವಾಗಿದೆ. ●


**FOR ALL YOUR DOMESTIC AND INTERNATIONAL TRAVEL ARRANGEMENTS**

*CONTACT*

**AUGUST TRAVEL SERVICE**

Agents For
INDIAN AIRLINES &
JET AIRLINES

**REGD. OFFICE :**
3/15, ASHIANA, SECTOR 17,
VASHI, NAVI MUMBAI
PHONES : 789 1970 * 789 1972
789 2451
GRAMS : AUGTRASERV

**ALSO AT :**
2/16, KABBUR HOUSE,
SION (E), MUMBAI-400 022.
PHONES : 407 2984 * 409 3573
407 7750

# ಶ್ರೀ ಶಿವರಾಮ ಕಾರಂತರ ಪ್ರವಾಸ ಕಥನಗಳು

## ಒಂದು ಅವಲೋಕನ

ಗೀತಾ ಚಂದ್ರಶೇಖರ್

'ಪ್ರವಾಸ'- ಸಮಾಜದ ಎಲ್ಲ ಮಟ್ಟದ ಜನರಿಗೂ ಪ್ರಿಯವಾದ ಹವ್ಯಾಸ. ಆದರೆ ಅದರ ಅನುಭವಗಳನ್ನು ಬರಹದ ಮೂಲಕ ವ್ಯಕ್ತಪಡಿಸುವುದು ಒಂದು ಕಲೆ. ನಮ್ಮ ತತ್ವಜ್ಞಾನಿಗಳು ಧಾರ್ಮಿಕ ನೆಲೆಗಟ್ಟಿನ ಉದ್ದೇಶದಿಂದ ಯಾತ್ರೆ ಕೈಗೊಂಡರೂ ಬರಹದ ಮೂಲಕ ಅದನ್ನು ಭವಿಷ್ಯ ಪೀಳಿಗೆಗೆ ಒದಗಿಸಲಿಲ್ಲ. ಕಲ್ಹಣನ 'ರಾಜತರಂಗಿಣಿ' ಯಂತಹ ಅಪರೂಪದ ಪ್ರಯತ್ನಗಳನ್ನು ಬಿಟ್ಟರೆ, 1881ರ 'ಕರ್ಕಿ ವೆಂಕಟರಮಣ ಶಾಸ್ತ್ರೀ ಸೂರಿ' ಅವರ 'ದಕ್ಷಿಣ ಯಾತ್ರಾ ಚರಿತ್ರೆ' ಕನ್ನಡದ, ಮೊತ್ತ ಮೊದಲ ಪ್ರವಾಸ ನಿರೂಪಣೆಯ ಗ್ರಂಥವಿರಬಹುದೆಂಬುದು ಕೆಲವರ ಅಭಿಪ್ರಾಯ. ಈ ದೃಷ್ಟಿಯಿಂದ ವಿ. ಸೀತಾರಾಮಯ್ಯನವರ 'ಪಂಪಾಯಾತ್ರೆ' - 1926 ರಲ್ಲಿ ಮೊದಲು ಗ್ರಂಥ ರೂಪದಲ್ಲಿ ಪ್ರಕಟಗೊಂಡಿತು. ಈ ಸಾಹಿತ್ಯ ಪ್ರಕಾರದ ನಂತರದ ಬೆಳವಣಿಗೆ ನಿಜಕ್ಕೂ ಗಮನಾರ್ಹ. ಗೊರೂರರು, ಕೃಷ್ಣಾನಂದ ಕಾಮತರಂತಹ ಲೇಖಕರ ಸುಂದರ ಪ್ರವಾಸ ಕಥನಗಳಂತೆಯೇ ಡಾ. ಶಿವರಾಮ ಕಾರಂತರ ಮೂರು ಪ್ರವಾಸ ಕಥನಗಳು ಈ ಸಾಹಿತ್ಯ ಪ್ರಕಾರಕ್ಕೆ, ಹಾಗೂ ಇತಿಹಾಸಕ್ಕೆ ನೀಡಿದ ಉತ್ತಮ ಕಾಣಿಕೆಗಳಾಗಿವೆ. ಈ ಪ್ರಬಂಧದಲ್ಲಿ ಕಾರಂತರ ಮೂರು ಪ್ರವಾಸ ಕಥನಗಳನ್ನು ವಿಶ್ಲೇಷಿಸಿದ್ದೇನೆ. ಕಾರಂತರ ಮೊದಲ ಪ್ರವಾಸ ಕಥನ 'ಅಬುವಿಂದ ಬರಾಮಕ್ಕೆ' 1950ರಲ್ಲಿ ಪ್ರಕಟಣೆ ಗೊಂಡುದು.

ಭಾರತದ ಕೆಲವು ಇತಿಹಾಸ ಪ್ರಸಿದ್ಧ ವಾಸ್ತು ಕೃತಿಗಳ, ಹಾಗೂ ನಿಸರ್ಗ ಸುಂದರ ಧಾಮಗಳ ಪ್ರವಾಸದ ಅನುಭವವೇ ಈ ಕೃತಿ.

ರಜಪುತಾನದ ವೈಭವದ ನೆನಪನ್ನು ಹಸಿರಾಗಿಸುವ ಪ್ರದೇಶಗಳು ಅಬುಬೆಟ್ಟ, ಪುಷ್ಕರ, ಅಜ್ಮೀರ ಮತ್ತು ಜಯಪುರ.

11ನೇ ಶತಮಾನದ ದೇವಾಲಯಗಳಲ್ಲಿ ಪ್ರಸಿದ್ಧವಾದ 'ದಿಲ್‌ವಾಡ' ಹೆಸರಿನ ಜೈನರ ಯಾತ್ರಾಸ್ಥಳ ಅಬುಬೆಟ್ಟ. ವಾಸ್ತು ಶಿಲ್ಪದ ಆಂತರಿಕ ಶೋಭೆಯನ್ನೆಲ್ಲಾ ತನ್ನಲ್ಲಿ ತುಂಬಿಕೊಂಡಿರುವ ಈ ದೇವಾಲಯಗಳು. ಅಭಿವ್ಯಕ್ತಿಯ ರೂವಾರಿಗಳಾದ ಲೇಖಕರಿಗೆ ಕಂಡುದರ ವಿವರವನ್ನು ಮರೆಯಿಸಿ ಮತ್ತೆ ಕಾಣುವ ಬಯಕೆಯನ್ನು ಕೆಣಕಿವೆ.

ಅಜ್ಮೀರ-ಹಿರಿಯ ಸಂತನೊಬ್ಬನ ಸಮಾಧಿಯಾದ 'ಪ್ರಸಿದ್ಧ ದರ್ಗಾ'ವನ್ನು ಹೊಂದಿರುವ ಮುಸಲ್ಮಾನರ ಪವಿತ್ರ ಸ್ಥಳವಾದರೆ, ಪುಷ್ಕರ - ನಾಲ್ಮೊಗ ಬ್ರಹ್ಮ ವಿಗ್ರಹದ - ದೇವಾಲಯವನ್ನು ಹೊಂದಿರುವ ಹಿಂದುಗಳ ಯಾತ್ರಾ ಸ್ಥಳವಾಗಿದೆ.

ಜಯಪುರದಲ್ಲಿನ ಅಂಬೇರದ ಅರಮನೆ, ಒಳಗಿನ ಕೆತ್ತನೆಗಳು - ರಜಪೂತರ ವೈಭವ ಜೀವನದ ನೆನಪನ್ನು ತಂದರೆ, 500 ವರ್ಷಗಳ ಪೂರ್ವದ ಖಗೋಳಜ್ಞರ ಸಾಧನೆಯ ಸಾಕ್ಷಿ - 'ಜಂತ್ರಮಂತ್ರ' ವೆನಿಸಿದೆ.

ಎಲ್ಲಕ್ಕಿಂತ ಹೆಚ್ಚಾಗಿ ಈ ಮೂರುಸ್ಥಳಗಳಲ್ಲಿನ ಹಸಿರು ತುಂಬಿದಬೆಟ್ಟಗುಡ್ಡಗಳಲ್ಲಿ ಜಾಗರವಾಡುವ ನವಿಲು, ಬಂಡಿಗಳ ಓಡಾಟ, ಸರೋವರಗಳು - ಲೇಖಕರ ಮನಸೆಳೆದ ಅಂಶಗಳು.

ದೇಶದ ರಾಜಧಾನಿಯಾದ ದಿಲ್ಲಿ ಪೌರಾಣಿಕ ಮಹತ್ವದ ದೃಷ್ಟಿಯಿಂದ ಮಹಾಭಾರತದ ಹಸ್ತಿನಾವತಿ, ಇಂದ್ರ ಪ್ರಸ್ಥದ ನೆನಪನ್ನುಂಟು ಮಾಡಿದರೆ, ಇತಿಹಾಸ, ಖಿಲ್ಜಿ, ಮೊಗಲ ಬಾದಶಹರ ವೈಭವದ ಸಾಕ್ಷಿಗಳ ನಗರವಾಗಿದೆ. ಪಾರ್ಲಿಮೆಂಟ್ ಸೆಕ್ರೆಟರಿಯೇಟ್, ಅಂತೆಯೇ ಜುಮ್ಮಾ ಮಸೀದಿ, ಕೆಂಪುಕೋಟೆ, ಕುತುಬ್, ಹಸಿರು ತುಂಬಿದ ಉದ್ಯಾನಗಳು ಇತ್ಯಾದಿಗಳ ಸಾಧನೆ, ಲಲಿತ ಸೊಬಗಿಗೆ ಮನಸೋತ ಲೇಖಕರಿಗೆ ನೋಡುವ ಕಣ್ಣುಗಳು, ಮೈ ಮರೆಯುವ ಮನಸ್ಸು, ಅಸೂಯೆಯಿಲ್ಲದ ರಸಿಕತೆ ಒಗ್ಗೂಡಿದೆ.

ತಾಂತ್ರಿಕ ದೃಷ್ಟಿಯಿಂದ ಪರಿಪೂರ್ಣವೆನಿಸದ ಆಗ್ರಾದ ತಾಜಮಹಲ್ - ಹಾಲುಗಲ್ಲಿನ ಕೆತ್ತನೆಗಳಿಂದ, ಉದ್ಯಾನ ಕಾರಂಜಿಗಳಿಂದ ಷಹಜಾನನ ಮೇಲಿನ ಅಭಿಮಾನವನ್ನು ಇಮ್ಮಡಿಸಿದೆ. ನಗರದ ಗದ್ದಲದ ನಡುವೆ ಶಾಂತವಾಗಿ ನಿಂತಿರುವ ಆಗ್ರಾ ಕೋಟೆ, ಕೆಂಪು ಹಾಗೂ ಹಾಲುಗಲ್ಲಿನ ರಚನೆಯ ಭವ್ಯ ಮಂದಿರ.

ಅಕ್ಬರನ ಹಿರಿಮೆ, ಎದೆಗಾರಿಕೆಗಳಿಗೆ ಸಾಕ್ಷಿಯಾದ ಫತ್ತೇಪುರದ ವಿಜಯದ್ವಾರ, ಗುರುವಿನ ಸಮಾಧಿ ಅರಮನೆಯ ಭಾಗಗಳು ನಿರ್ಮಾಣದಲ್ಲಿ ಒಂದಕ್ಕೊಂದು ಮೇಳವಿಸಿದಂತಿದೆ.

ನಿಸರ್ಗ ಸೌಂದರ್ಯದ ಅಪ್ಸರ ಲೋಕವೆನಿಸುವ ಸಿಮ್ಲಾ, ಹಿಮವತ್ಪರ್ವತಗಳ ಹಸಿರಿನ ನಡುವಿನ ಸುಂದರ ತಾಣವಾದರೆ, ಗಂಗೆಯ ತಡಿಯ ಕಾಳಿಯ ಸಮೀಪದ ಸಾರನಾಥ್ ಪ್ರಾಚೀನ ಅವಶೇಷಗಳನ್ನೊಳಗೊಂಡು ಬುದ್ಧನ ನೆನಪನ್ನು ಹಸಿರಾಗಿಸಿವೆ.

ಡಾಲ್ಮಿಯಾ ನಗರ ಔದ್ಯೋಗಿಕ ಕೇಂದ್ರವಾಗಿ, ಮೈಸೂರಿನ ಭದ್ರಾವತಿಯಂತಹ ಕಾರ್ಖಾನೆಯನ್ನು ಹೊಂದಿರುವ ಸ್ಥಳ. ಅಲ್ಲಿನ ಸಾಸರಾಮಿನ ಶೇರಶಹಾನ ಸಮಾಧಿ ರಚನೆ, ಕೆತ್ತನೆಯಲ್ಲಿ ಸರಳತೆ ಹೊಂದಿ ಭವ್ಯವೆನಿಸಿದೆ.

ಸ್ವಾತಂತ್ರ್ಯ ವೀರರ ವೇದಿಕೆಯಾಗಿದ್ದ ಕಲ್ಕತ್ತ ಸಂಗ್ರಹಾಲಯಗಳು, ರಾಮಕೃಷ್ಣ, ವಿವೇಕರ ಬೇಲೂರು, ದಕ್ಷಿಣೇಶ್ವರದಂತಹ ಮುಖ್ಯಸ್ಥಳಗಳನ್ನೊಳಗೊಂಡಿದ್ದರೂ, 'ಸಿಯಾಲ್ಡದ ನಿರಾಶ್ರಿತರ ವಸತಿಗಳು' ಲೇಖಕರ ಮನಮಿಡಿದಿವೆ. 1948ರ ನೆನಪನ್ನು ಕೆದಕಿ, ಚಿರಕಾಲ ನೋವನ್ನುಳಿಸಿದುದರ ಜೊತೆ ಈ ಬಗ್ಗೆ 'ನಾನೇನು ಮಾಡಿದ್ದೇನೆ' - ಎಂಬ ಅಂತರಂಗದ ಶೋಧನೆ, ತುಡಿತ ಪ್ರತಿಯೊಬ್ಬ ಭಾರತೀಯನೂ ತನ್ನಲ್ಲಿ ಕೇಳಿಕೊಳ್ಳುವ ಪ್ರಶ್ನೆ.

ಆದಿವಾಸಿಗಳ ಜೀವನ, ವ್ಯಕ್ತಿಗಳನ್ನು ಗಮನಿಸುವ ದೃಷ್ಟಿಯಿಂದ, ಲೇಖಕರು ಕೈಗೊಂಡ ಬರಾಮ ಪ್ರವಾಸ, ಅಲ್ಲಿನ ಮೀನುಗಾರಿಕೆ, ಬೇಸಾಯ, ಗೀತ, ಲಯಗಳ ಅಲ್ಲಿನವರ ನೃತ್ಯ ಗಮನ ಸೆಳೆದಿದೆ.

ಕೇವಲ ಮೇಲು ನೋಟಕ್ಕೇ ತೃಪ್ತಿ ಹೊಂದದೇ, ಒಂದೊಂದು ಅಂಶವನ್ನು - ಒಳಹೊಕ್ಕು ಗಮನಿಸಿ, ಅದರ ಸಾರವನ್ನು ಸವಿಯುವ ಅವಕಾಶವನ್ನು ಓದುಗರಿಗೆ ಒದಗಿಸಿಕೊಟ್ಟಿರುವ -- ಈ ಕೃತಿ ಭಾಷೆ, ಅಭಿವ್ಯಕ್ತಿ, ವರ್ಣನೆ, ಹಾಸ್ಯ, ವಿಡಂಬನೆ -- ಈ ಹಲವಾರು ದೃಷ್ಟಿಗಳಿಂದ ಗಮನಾರ್ಹವೆನಿಸಿದೆ.

ಪಶ್ಚಿಮದ ರಾಷ್ಟ್ರಗಳ ಚಿತ್ರ, ಶಿಲ್ಪ, ಕಲೆಗಳು ಬ್ಯಾಲೆ, ನಾಟಕಗಳು ಹಾಗೂ ಉದ್ಯಮಗಳ ಬಗ್ಗೆ ಓದಿ ತಿಳಿದಿದ್ದ ಲೇಖಕರು ಪ್ರತ್ಯಕ್ಷ ಕಂಡು, ಸವಿಯುವ ಉದ್ದೇಶದಿಂದ ಕೈಗೊಂಡ ಪ್ರವಾಸದ ಅನುಭವ ಕಥನವೇ 'ಅಪೂರ್ವ ಪಶ್ಚಿಮ'

ಕೈರೋವಿನಿಂದ ಹಿಡಿದು, ರೋಮ್ ನಗರದವರೆಗೆ ಲೇಖಕರು ಸಂದರ್ಶಿಸಿದ ಸ್ಥಳಗಳನ್ನು ಮುಖ್ಯವಾಗಿ 2 ಗುಂಪುಗಳನ್ನಾಗಿ ಮಾಡಬಹುದು. 1) ಮಾನವ ನಿರ್ಮಿತ ಅದ್ಭುತಗಳು, ನಡೆಸಿದ ಸಾಧನೆಗಳು. 2) ನಿಸರ್ಗ ನಿರ್ಮಿತ ರುದ್ರ ರಮಣೀಯ ದೃಶ್ಯಗಳು - ಎಲ್ಲಕ್ಕಿಂತ ಹೆಚ್ಚಾಗಿ ಪಂತಪಂತ

ದಲ್ಲಿಯೂ ಲೇಖಕರು ತಾಯ್ನೆಲದ ನೆನಪು ಮಾಡಿಕೊಂಡಿರುವುದು ಗಮನೀಯ.

ಪಯಣದ ಹಾದಿಯ ಮೊದಲ ದರ್ಶನ ಕೈರೋವಿನ ಸ್ಫಿಂಕ್ಸ್ ಗಂಭೀರ ಮುಖದ ನರಸಿಂಹಾಕೃತಿಯ ನೆನಪು ತಂದಿದೆ. ಕತ್ತಲೆಯ ಇರುಕಿನ ಹಾದಿಯ ನಂತರದ, ಗಂಭೀರ ಆವರಣದ ಕೋಣೆಯ ಮಧ್ಯೆ ಇರಿಸಿದ ಮೃತ್ಯು ಸಂಪುಟ - ಹೊರಗಿನಿಂದ ಭವ್ಯವಾದ ನಿರ್ಮಾಣಪಿರಮಿಡ್ಡು ಎನಿಸಿದರೆ, ಒಳಗಿನ ವಾತಾವರಣ ಶಾಂತ ಹಾಗೂ ಸೋಜಿಗವೆನಿಸುತ್ತದೆ.

ಇಂಗ್ಲೆಂಡಿನ ಪ್ರವಾಸದ ಅನುಭವಗಳನ್ನು ಓದುಗರೊಡನೆ ಹಂಚಿಕೊಳ್ಳಲು ನೂರಾರು ಪುಟಗಳನ್ನೇ ಮೀಸಲಾಗಿರಿಸಿರುವ ಲೇಖಕರು, 4 ಭಾಗಗಳನ್ನಾಗಿ ಮಾಡಿ ವಿಷಯಗಳನ್ನು ವಿವರಿಸಿದ್ದಾರೆ.

ನಿಸರ್ಗದ ಅಂಕಿತ ಸೊಗದ ದೇಶವಾದ ಇಂಗ್ಲೆಂಡ್ ಲೇಖಕರಿಗೆ ಹಸಿರು ಹಚ್ಚೆಯ ಆನಂದವನ್ನು ತಂದುದಲ್ಲದೇ ಜನರ ಕರ್ತವ್ಯಪ್ರಜ್ಞೆ, ಪ್ರಾಮಾಣಿಕತೆ, ಔಚಿತ್ಯ ಪ್ರಜ್ಞೆ, ಮನ ಸೆಳೆದಿದೆ.

ವಾಸ್ತುಶಿಲ್ಪದ ದೃಷ್ಟಿಯಿಂದ 'ಸೈಂಟ್‌ಪಾಲ್ಸ್ ಚರ್ಚ್, ವೆಸ್ಟ್ ಮಿನಿಸ್ಟರ್ ಆಬೆಯಂತಹ ಹಳೆಯಚರ್ಚುಗಳು, ಪಾರ್ಲಿಮೆಂಟ್ ಮಂದಿರ, ಟ್ರಫಾಲ್ಗರ್ ಚೌಕ - ನೋಟಕ್ಕೆ ಸರಳತೆ, ಸಾಂಪ್ರದಾಯಕತೆಯನ್ನು ಹೊಂದಿದ್ದರೂ, ಪ್ರಭಾವ ಅಪರಿಮಿತ.

ಅಂತೆಯೇ ಸಂಗ್ರಹಾಲಯಗಳು, ಪ್ರತಿಯೊಂದು ದೇಶದ ಕೈಗನ್ನಡಿ ಎಂಬುದಕ್ಕೆ ಇಲ್ಲಿ 'ನೇಚುರಲ್ ಹಿಸ್ಟರಿ ಮ್ಯೂಸಿಯಂ ' ಶ್ರಮ್ಮ ಉಪಕರಣಗಳ ಸೈನ್ಸ್ ಮ್ಯೂಸಿಯಂ, ಲೇಖಕರ ಗಮನ ಸೆಳೆದ ಟುಸಾಡಳ - ಮೇಣದ ಗೊಂಬೆಗಳ ಮ್ಯೂಸಿಯಂ ಒಂದೊಂದೂ ಸುಲಭದಲ್ಲಿ ಕಂಡು, ತಿಳಿದು ಸಂತೋಷಿಸಬಹುದಾದ ಸಂಸ್ಥೆಗಳು.

ಬ್ರಿಟಿಷ್ ಉದ್ಯಮದ ಬಗ್ಗೆ ಮೆಚ್ಚುಗೆ ವ್ಯಕ್ತ ಪಡಿಸುವ ಲೇಖಕರು, ಅಲ್ಲಿನ 'ಔದ್ಯೋಗಿಕ ಪ್ರದರ್ಶನ'ವನ್ನು ಪ್ರತ್ಯಕ್ಷ ನೋಡಿ ಆಶ್ಚರ್ಯಪಟ್ಟಿದ್ದಾರೆ. ಸ್ವದೇಶಿಯ ಉತ್ಪನ್ನಗಳ ಬಗ್ಗೆ ಇರುವ ಅಭಿಮಾನ, ವೈವಿಧ್ಯತೆ ಇದ್ದರೂ, ವ್ಯವಸ್ಥೆ, ಓರಣ, ಪ್ರಾಮಾಣಿಕತೆಗೆ ಹೆಸರಾದ ಜನರ, ಅಪರಿಸರದ ನಡುವೆ - ನಮ್ಮವರ ನೆನಪು ನಿರಾಶೆ ತಂದಿದೆ.

ಅಂತರಾಷ್ಟ್ರೀಯ ಭಾಷೆ ಎನಿಸಿದ ಇಂಗ್ಲೀಷ್ ಕಲೆ, ಸಾಹಿತ್ಯ ಪ್ರಪಂಚದಲ್ಲಿ ನೀಡಿದ ಕಾಣಿಕೆ, ಹೆಚ್ಚಾಗಿ ಎಲ್ಲ ದೇಶಗಳ ಕಲೆಗಳಿಗೂ ಇಲ್ಲಿನ ಜನರ ಆದರ, ಪ್ರೋತ್ಸಾಹ ದೊರೆತಿರುವುದು ಅವರ ಮನೋಭಾವದ ಸಂಪನ್ನತೆಯ ಪ್ರತ್ಯಕ್ಷ ಅರಿವು ಮಾಡಿಕೊಟ್ಟಿದೆ.

ನೆಶನಲ್ ಗೆಲರಿ - ಯೂರೋಪ್ ದೇಶಗಳ ಮಧ್ಯ ಯುಗದ ಹಿರಿಯ ಕಲಾವಿದರಾದ ಪಾವ್ಲ, ವೆರೊನೀಸ್, ರೆಂಬ್ರಾಂಡ್, ವಿಸ್ಲರ್, ರಸ್ಕಿನ್, ಟರ್ನ - ರಂತಹವರ ಕಲಾಕೃತಿಗಳನ್ನು ಹೊಂದಿದೆ. ವಿಸ್ಲರನ 'ಬಿಳಿಯುಡುಗೆಯ ನಾರಿ', ಬಿಳುಮೆಯ ಸೊಗಸು, ಲಾಲಿತ್ಯಗಳ ಅಭಿವ್ಯಕ್ತಿಯಾದರೆ, ರಸ್ಕಿನ್ನನ 'ನೀಲಿಮ ರಾತ್ರಿ' ವಿವಿಧ ನೀಲ, ಕಪ್ಪು ಬಣ್ಣಗಳ ವ್ಯತ್ಯಾಸವನ್ನು ಕೆರಳಿಸಿ, ಭಾವನಾಲೋಕವನ್ನೇ ಸೃಷ್ಟಿಸಿದಂತಿದೆ.

ಇಟೆಲಿಯ ಲಿಯನಾರ್ಡೋವಿನ ಚಿತ್ರ - ಬರಹಗಳ ಪ್ರದರ್ಶನ ಮೆಚ್ಚುಗೆ ತಂದಿದೆ.

ಅಲ್ಲದೇ ನಾನಾ ದೇಶಗಳ ಯುದ್ಧ ಸಾಮಾಗ್ರಿಗಳ 'ಹೆನ್ರಿವಾಲೇಸರ 'ಹೆಸರಾಂತ' ವಸ್ತು ಸಂಗ್ರಹಾಲಯ ಮತ್ತೆ ನೋಡಬೇಕೆನಿಸಿತು.

ಲೇಖಕರಿಗೆ ಬಲು ಪ್ರಿಯವಾದ ನಾಟಕ ಕ್ಷೇತ್ರದಲ್ಲಿ ಶೇಕ್ಸ್ ಪಿಯರನ ನಾಟಕಗಳ ಅಭ್ಯಾಸಕ್ಕಾಗಿಯೇ ಮೀಸಲದ 'ಎವಾನ್‌ತೀರದ ನಾಟಕ ಶಾಲೆ,' 'As you like it' ನ ಪ್ರದರ್ಶನದಲ್ಲಿನ ಅಭಿನಯಸಹಜತೆ, ಜನರಲ್ಲಿ ಕಲಾಭಿರುಚಿ ಬಲು ಪ್ರಿಯವೆನಿಸಿತು.

ಬ್ಯಾಲೆಗೆ ರಷ್ಯಾ ಜನ್ಮ ಭೂಮಿಯಾದರೂ 'ಸೆಡ್ಲರ್ ವೆಲ್ಸ್'ನ 3 ಬ್ಯಾಲೆಗಳ ಮನಸೆಳೆದ ಸಂಗೀತ, ಕ್ರಮಬದ್ಧತೆಯ ಜಾನಪದ ಹಿನ್ನೆಲೆಯ ಪ್ರದರ್ಶನ ಒಂದು ದೇಶದ ಸಂಸ್ಕೃತಿಯ ಬೆನ್ನೆಲುಬು ಎನ್ನಿಸಿತು.

ಇದೆಲ್ಲದರ ವೀಕ್ಷಣೆಗೆ ಸಹಕಾರ ನೀಡಿದ ಸ್ವದೇಶೀ ಹಾಗೂ ವಿದೇಶಿ ಸ್ನೇಹಿತರು, ಅವರ ಸಂಶೋಧನೆ, ವ್ಯಾಸಂಗ ಎಲ್ಲವನ್ನು ಲೇಖಕರು ಮನಃ ಪೂರ್ವಕವಾಗಿ ನೆನಪು ಮಾಡಿಕೊಂಡಿದ್ದಾರೆ.

ಕಡಲು, ಭೂಮಿ, ಪರ್ವತ, ಹಸಿರು -- ಈ ನಿಸರ್ಗದ ಮಡಿಲಿನ ನಾಡುಗಳು ನಾರ್ವೆ ಸ್ವೀಡನ್ ಹಾಗೂ ಹಾಲೆಂಡ್, ಹಾಗೂ ಸ್ವಿಟ್ಜರ್‌ಲೆಂಡ್.

ಮೀನುಗಾರಿಕೆ, ವಿದ್ಯುದುತ್ಪಾದನೆ ಮುಖ್ಯ ವೃತ್ತಿಯಾಗಿರುವ ನಾರ್ವೆಯ ಜನರು ಬೇಸಿಗೆ ಒಂದೊಂದು ನಿಮಿಷವನ್ನೂ ಸದುಪಯೋಗ ಪಡಿಸಿಕೊಳ್ಳುವ ಸಾಹಸ ಪ್ರವೃತ್ತಿಯವರಾಗಿದ್ದಾರೆ. ಇಂತಹುದೇ ಸಾಹಸವನ್ನು ಶಿಲ್ಪ ಹಾಗೂ ಚಿತ್ರಕಲಾ ಪ್ರಪಂಚದಲ್ಲಿ ನಡೆಸಿದ ನಾರ್ವೆಯ ವೀಗಲೇಂಡ್‌ನ ಶಿಲೆಯಲ್ಲಿ ಕಾವ್ಯ ಬಣ್ಣನೆ - ಲೇಖಕರಿಗೆ ಮಹಾಭಾರತದ ನೆನಪನ್ನು ತಂದಿದೆ. ನಾರ್ವೆಯ ಜನರ ಇತಿಹಾಸ, ಸಂಸ್ಕೃತಿಯ ಪ್ರತೀಕವಾದ ಪುರಭವನ, ಶಿಲ್ಪ, ಚಿತ್ರ ಕಲೆಗಳ ಅಪೂರ್ವ ಸಂಗ್ರಹವನ್ನು ಹೊಂದಿದೆ.

ಕಾರ್ಲ್‌ಲಿನೆಯಂತಹ ವಿಜ್ಞಾನಿಯ ನಾಡಾದ ಸ್ವೀಡನ್, ಯಂತ್ರೋದ್ಯಮಕ್ಕೆ ಹೆಸರಾದ ದೇಶವಾಗಿದೆ. ಅಂತೆಯೇ ನಿರ್ಮಾಣದ ಶೈಲಿಯಲ್ಲಿ ತನ್ನದೇ ಆದ ಹಿರಿತನವನ್ನು ಹೊಂದಿರುವ ರಾಷ್ಟ್ರೀಯ ಮ್ಯೂಸಿಯಂ ಹಾಗೂ ಹೆಬ್ರಾಂಡ್‌ನ ಅದ್ಭುತ ಕೃತಿಗಳು, ಜೊತೆಗೆ ಜನಗಳ ಔದಾರ್ಯ - ಸ್ವೀಡನ್ ಶ್ರೀಮಂತ ನಾಡು ಎಂಬುದನ್ನು ಸ್ಪಷ್ಟ ಪಡಿಸಿದೆ.

ಹೈನುಗಾರಿಕೆ ಹಾಗೂ ಕೃಷಿಯನ್ನು ಮುಖ್ಯ ಕಸುಬನ್ನಾಗಿ ಹೊಂದಿರುವ ಹಾಲಿನನಾಡು ಹಾಲೆಂಡ್ ಪ್ರಕೃತಿಯ ಮಡಿಲಿನ ಶಿಶು. ಇಲ್ಲಿನ ನಿಸರ್ಗದ ಸಿರಿ ಲೇಖಕರಿಗೆ ಪ್ರಿಯವಾದಂತೆ ರೆಂಬ್ರಾಂಡ್ ವರ್ಮೀರ ನಂತರ ಕಲಾವಿದರ ಕೃತಿಗಳು ಅವರ ಪ್ರತಿಭೆಯ ಪರಿಚಯ ಮಾಡಿಕೊಟ್ಟಿವೆ.

ಪ್ರಕೃತಿಯ ಸಿರಿಸಂಪತ್ತನ್ನೆಲ್ಲ ತನ್ನಲ್ಲಿ ಒಳಗುಮಾಡಿಕೊಂಡಿರುವ ದೇಶ ಸ್ವಿಟ್ಜರ್‌ಲೆಂಡ್ ಇಲ್ಲಿನ ಹಿಮಕವಿದ ಶಿಖರ, ಹಸಿರು ತುಂಬಿದ ಪರ್ವತ, ಸರೋವರಗಳು ಲೇಖಕರ ಮನಸ್ಸನು ಸೆರೆ ಹಿಡಿದರೆ, ಪ್ರಸಿದ್ಧ 'ಲೂರಿಕ' ವಿಶ್ವವಿದ್ಯಾನಿಲಯ ಹಾಗೂ ಇಂಟರಲಾಕನ್ ಮತ್ತು ಯಂಗ್ ಫ್ರೋ ನಮ್ಮ ಹಿಮಾಲಯದ ನೆನಪನ್ನು ತಂದಿದೆ.

ಪ್ರಕೃತಿಯ ಸದುಪಯೋಗದಲ್ಲಿ ನಮ್ಮವರಿಗೂ, ಇಲ್ಲಿನವರಿಗೂ ಇರುವ ಅಂತರ ನಿರಾಶೆ ತಂದಿದೆ.

ಮಹಾಯುದ್ಧದ ಕಾವಿಗೆ ಒಳಪಟ್ಟು ಚೇತರಿಸಿಕೊಳ್ಳುತ್ತಿದ್ದ ಡೆನ್ಮಾರ್ಕ್ - ಶೇಕ್ಸ್‌ಪಿಯರನ 'ಹಾಮ್ಲೆಟ್‌ನಿಂದ' ಅಮರವಾಗಿದ್ದರೆ, ನಿರಾಶ್ರಿತರ ನೆಲೆಯಾಗಿದ್ದ ಹೆಂಬರ್ಗ್ ನಗರ ಮತ್ತೆ ನಿರ್ಮಾಣಗೊಳ್ಳುತ್ತಿರುವ ಕಾರ್ಖಾನೆಗಳಿಂದ, ಹೆಗನ್‌ಬೇಕ್‌ರವರ ಉತ್ತಮ ಸಾಧನೆಯಿಂದ ಪುನರುಜ್ಜೀವನಗೊಳ್ಳುತ್ತಿರುವುದು ಲೇಖಕರ ಗಮನಕ್ಕೆ ಬಂದಿದೆ. ಈ ಸಂದರ್ಭದಲ್ಲಿ ಯುದ್ಧದ ನಂತರದ - ನಮ್ಮ ದೇಶದ ಉದ್ಯಮದ ಅಭಿವೃದ್ಧಿಯ ಬಗ್ಗೆ ಅನುಮಾನ, ನಿರಾಶೆ ಜೊತೆ ಜೊತೆಗೆ ವ್ಯಕ್ತವಾಗಿದೆ.

ಕೆಥೋಲಿಕ್ ಧರ್ಮದ ಪೂರ್ಣ ವರ್ಚಸ್ಸಿನ ಬೆಲ್ಜಿಯಮ್, ಬ್ರಸೆಲ್ಸ್, ಗೆಂಟ್ಸ್ ನಗರಗಳ ಚರ್ಚುಗಳ ವಾಸ್ತು ಶಿಲ್ಪಗಳು, ಲೂಕಾಸ್, ರೂಬೆನ್ಸ್‌ರಂತಹ ಹಿರಿಯ ಕಲಾವಿದರ ಚಿತ್ರ ಕಲಾಕೃತಿಗಳು ಲೇಖಕರಿಗೆ ಮರೆಯಲಾರದ ಅನುಭವವೆನಿಸಿದೆ.

ಇತಿಹಾಸದ ದೃಷ್ಟಿಯಿಂದ ಮೊದಲುಗೊಂಡು ಕಲೆ ಸಾಹಿತ್ಯಗಳ ದೃಷ್ಟಿಯಿಂದ ಪಾಶ್ಚಾತ್ಯ ರಾಷ್ಟ್ರಗಳಿಗೆ ವಿಲಾಸಭೂಮಿ ಎನಿಸಿದೆ ಫ್ರಾನ್ಸ್. ವಾಲ್ಟೇರ್ ಕಾರ್ಲಮಾರ್ಕ್ಸ್ ಮೊದಲಾದವರು ಕ್ರಾಂತಿ ಪ್ರಿಯರಾದರೆ, ಮೊಪಾಸಾಂ, ಪಾಲ್‌ಸಾತ್ರೆರವರು ಸಾಹಿತಿಗಳ ಮನ ಸೆಳೆದಿದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ ಕಲೆಯನ್ನು ಸಾಮಾನ್ಯ ಮಾನವನ ಸೊತ್ತಾಗಿ ಮಾಡಿ ಪಿಕಾಸೊ, ಸಿಜಾನ್, ಗಾಗಿನ್ ಇಂತಹವರ ಚಿತ್ರ ಕಲಾ ವೈಭವ ಹೀಗೆ ಹಲವಾರು ರೀತಿಯ ಆಕರ್ಷಣೆಗೊಳಗಾಗಿ ಇಲ್ಲಿಗೆ ಬರುವ ರಸಿಕರ ಯಾತ್ರಾರ್ಥಿಗಳ ಸಂಖ್ಯೆ ಅಧಿಕ.

ಈ ದೇಶದಲ್ಲಿ ನಡೆದ ಲೇಖಕರ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸುವ ಉದ್ದೇಶ, ಭಾಷಾಸಮಸ್ಯೆಯಿಂದ ಕಾರಂತರಿಗೆ ನಿರಾಸೆ ತಂದಿತು.

ಇಲ್ಲಿಯ ಜನರ ವಿಲಾಸಮಯ ಜೀವನಕ್ಕೆ, ಜೀವನೋಪಾಯಕ್ಕೆ ಅನುವು ಮಾಡಿಕೊಟ್ಟಿರುವ ಕಡಲು ಬೆಟ್ಟಗಳು, ಹಸಿರು ತುಂಬಿದ ದ್ವೀಪಗಳ ಸೌಂದರ್ಯ ಮನಸೆಳೆದರೂ, ವಿಲಾಸದ ತಾಣಗಳಾಗಿದ್ದ ಈ ಪ್ರದೇಶಗಳು ಲೇಖಕರಿಗೆ ರುಚಿಸಲಿಲ್ಲ.

ಫ್ರೆಂಚ್ ಸಾಮ್ರಾಟರ ವೈಭವದ ರಾಜಧಾನಿ ಯಾಗಿದ್ದ ಪ್ಯಾರಿಸ್ ವ್ಯವಸ್ಥಿತವಾದ ನಗರ, ಅಲ್ಲಿಯ ಜನರ ಸಾಧನೆಯ ಸಾಕ್ಷಿಗಳಾಗಿರುವ 'ಐಫಿಲ್ ಟವರ್' ಚರಿತ್ರಾರ್ಹ ನೋಟರ್ ಡೆಮ್ ಕೆಥೆಡ್ರಲ್‌ನ ಕುಸುರಿ ಕೆಲಸ, ಲಕ್ಸೆಂಬರ್ಗ್‌ನ ಅರಮನೆ, ಲೂವ್ರ್ ಚಿತ್ರ ಶಾಲೆ - ಪ್ರಸಿದ್ಧ ಸ್ಥಳಗಳು. ಲೂವ್ರ ಚಿತ್ರ ಶಾಲೆಯ ಲಿಯ ನಾರ್ಡೊಲಿನ -ಮೊನಲೀಸಾ, ಹೆನ್ರಿರೂಸೋವಿನ ಹಾವಾಡಿಗ, ಹಾಗೂ ಇತರ ಚಿತ್ರ,ಶಿಲ್ಪಗಳ ಸಂಗ್ರಹ, ಭಾರತೀಯರಿಗೆ ಹಾಗೂ ಬೌದ್ಧ ಧರ್ಮದ ದೃಷ್ಟಿಯಿಂದ ಗಮನಾರ್ಹವೆನಿಸಿದ 'ಮ್ಯೂಸಿಯಂ - ಕಲಾ ವೈಭವದ ಸಾಕ್ಷಿಗಳೆನಿಸಿವೆ.

ಲೂವ್ರ್ ಅರಮನೆಯ ವೈಭವದ ಚಿತ್ರಗಳಲ್ಲಿ ಆಗ್ರಾ, ದೆಹಲಿಯ ಅರಮನೆಗಳ ಚೆಲುವು, ಲಾಲಿತ್ಯ, ನಯಗಾರಿಕೆ ಕಾಣಬರಲಿಲ್ಲ ಬದಲಾಗಿ ಸಂಪತ್ತಿನ ಢಾಂಬಿಕತೆ ಕಂಡಿದೆ.

ಲೇಖಕರಿಗೆ ಪ್ರಿಯವೆನಿಸಿದ ಸ್ಪೇನಿಷ ನರ್ತಕಿ 'ಕಾರ್ಮೆನ್ ಅಮಾಯಾಳ' ಚೈತನ್ಯಮಯ ನೃತ್ಯಾಭಿನಯ ಹಾಗೂಪಾಲಿಸ ಬರ್ಜರನ ನೃತ್ಯ ನಾಟಕಗಳು ಕಲಾಪೂರ್ಣವೆನಿಸಿದವು.

ಇಟಲಿಯ ಮಿಲಾನ್, ವೆನಿಸ್, ರೋಮಗಳು ಕ್ರೈಸ್ತ ಧರ್ಮದ ಉನ್ನತಿ, ಅವನತಿಯ ಕೇಂದ್ರ ಬಿಂದುಗಳಾಗಿರುವಂತೆಯೇ. ಚಿತ್ರ, ಶಿಲ್ಪಕಲೆಗಳ ದೃಷ್ಟಿಯಿಂದ ಲೇಖಕರ ಗಮನ ಸೆಳೆದವು.

ಕೆಥೊಲಿಕ್ ಪಂಥದ ಪ್ರಚಾರ ಕೇಂದ್ರವಾದ ಇಟಲಿಯಲ್ಲಿ ಬಡತನ, ಕೊಳಕು ಸಾಮಾನ್ಯ ದೃಶ್ಯಗಳಾಗಿ ಕಂಡು ಬಂದರೂ ಜನರಲ್ಲಿ ವಿಲಾಸ ಪ್ರಿಯತೆ ರಕ್ತಗತವಾದಂತಿದೆ.

ನೆಪೊಲಿಯನ್‌ನ ಶಕ್ತಿ ಕುಸಿದು, ಕ್ರೈಸ್ತಧರ್ಮ ತಲೆಎತ್ತಿದ ನಂತರ ವೆನಿಸ್, ರೋಮ್, ಮಿಲಾನ್ ನಗರಗಳು ಕಲಾ ವೈಭವದಿಂದ ಪ್ರಪಂಚದ ಮನ್ನಣೆ ಪಡೆದವು.

ಮೈಕಲ್ ಎಂಜೆಲೊ ಪ್ರಾಚೀನ ಯುಗದ ನೆನಪು ತರುವ ವೆನಿಸ್, ಕೆನಲಿಟೊವಿನ ಚಿತ್ರಗಳಿಂದ ಅಮರಗೊಂಡಿದೆ. ಡೋಗೇ ಅರಮನೆ, ಲಿಯನಾರ್ಡೋರವಿನ ಜಗತ್ಪ್ರಸಿದ್ಧ ಎನನ್ಸಿಯೇಶನ್. ರಾಫೆಲ್, ಮೈಕಲ್ ಎಂಜಲೋವಿನ ಅದ್ಭುತ ಕಾಣಿಕೆಗಳನ್ನೊಳಗೊಂಡಿದೆ. ಅಂತೆಯೇ ಡುಮೋ ಇಗರ್ಜಿ, ಬೆಸ್ಸಿಸ್ಟಿ ಮಂದಿರ, ವೀಚಿಯೋ ಅರಮನೆ - ವೀಕ್ಷಕರ ಕಣ್ಣಿಗೆ ರಸದೌತಣ ನೀಡಿದೆ.

ಯೂರೋಪಿನ ಇತಿಹಾಸದಲ್ಲಿ ಹೆಚ್ಚಿನ ಪ್ರಾಧಾನ್ಯತೆ ಪಡೆದ ಬಹಳ ಪ್ರಾಚೀನ ನಗರ ರೋಮ್, ಕ್ರೈಸ್ತ ಧರ್ಮೀಯರ ಯಾತ್ರಾಸ್ಥಳ, ಸುಪ್ರಸಿದ್ಧ ವ್ಯಾಟಿಕನ್ ನಗರಗಳ ಚರ್ಚುಗಳು, ಕೆಥೆಡ್ರಲ್‌ಗಳು,ಸಂಖ್ಯೆ ಹಾಗೂ ಭವ್ಯತೆಯ ದೃಷ್ಟಿಯಿಂದ ಮತ್ತೆ ನೋಡಬೇಕೆನಿಸಿದವು. ವ್ಯಾಟಿಕನ್ ಚಾಪೆಲ್‌ನ ಎಂಜೆಲೋವಿನ 'ಅಮರ ಯೇಸು' ಕೆಂಟಕೊಟ್ಟನ ಶಾಂತವಾತಾವರಣದ ಸಮಾಧಿ, ರೋಮನರ ವೈಭವದ ಅವನತಿಗಳ ಸಾಕ್ಷಿಗಳಾಗಿವೆ.

'ವಿಸುವಿಯಸ' ಅಗ್ನಿಪರ್ವತದ ಲಾವದ ಹೊಳೆಗೆ ಬಲಿಯಾದ 'ಪಾಂಪೀ' ನಗರದ ಪ್ರಾಚೀನ ರೋಮನ ಸಂಸ್ಕೃತಿ, ಮಾನವನ ಕ್ರೌರ್ಯ, ದಾಷ್ಟ್ಯಗಳಿಗೆ ಬಲಿಯಾದ ಹಂಪಿಯ ನೆನಪನ್ನು ಲೇಖಕರಿಗೆ ತಂದಿದೆ. ಅವಶೇಷಗಳ ವೀಕ್ಷಣೆ ಅಂದಿನ ಶ್ರೀಮಂತ ಜೀವನಕ್ಕೆ ಸಾಕ್ಷಿಯಾಗಿದೆ.

ಪಶ್ಚಿಮದ ಈ ರಾಷ್ಟ್ರಗಳ ಪ್ರವಾಸದಿಂದ ಹಿಂದಿರುಗುವ ಪ್ರಯಾಣದಲ್ಲಿ ಲೇಖಕರ ಮನಸ್ಸು ಕೆಣಕಿದ ಕೇಳಿದ ಪ್ರಶ್ನೆಗಳು ಹಲವಾರು ಅಲೌಕಿಕತೆಯ ಅದೃಶ್ಯ ಪಥದಲ್ಲಿ ತೇಲಾಡುವ ನಾವು, ಅಲ್ಲಿನ ಜನರಂತೆ ಕರ್ತವ್ಯ ನಿಷ್ಠೆ ಸಾಹಸ ಪ್ರವೃತ್ತಿಯ ಹಾದಿಗೆ ಎಂದು ನಡೆಯುವವರು ಎಂಬುದು.

ಕಾರಂತರ 'ಅರಸಿಕರಲ್ಲ' ಪ್ರವಾಸ ಕಥನ 1987ರಲ್ಲಿ ಸರ್ಕಾರದ ವತಿಯಿಂದ ನಡೆಸಿದ 'ಪೂರ್ವಜರ್ಮನಿ ಹಾಗೂ ರಷ್ಯಾ ಪ್ರವಾಸಗಳ ಅನುಭವದ ಸಾರ.

ಕಮ್ಯೂನಿಸ್ಟ್ ರಾಷ್ಟ್ರಗಳಲ್ಲಿ ಲೇಖಕರಿಗೆ 'ಒಪೆರಾ' ಬಗ್ಗೆ ಅಧ್ಯಯನಕ್ಕೆ ಅವಕಾಶವಾದುದು.

ಕ್ರಿಸ್ತಪೂರ್ವದ ರೋಮನರ ಅವಶೇಷಗಳನ್ನು ಬರ್ಲಿನ್‌ಗೆ ಸಾಗಿಸಿ, ತಂದಿರುವ 'ಪೆರ್ಗಮಮ್' ಸಂಗ್ರಹಾಲಯ, ನಿಜವಾದ 'ಪೆರ್ಗಮಮ್' ನಗರದ ಅನುಭವ ತಂದಿದೆ. ಪುರಾತನ ಪಚ್ಚೆ ಭಂಡಾರ - ವಿಜಯನಗರದ ನೆನಪನ್ನು ಕೆಣಕಿವೆ.

ಜರ್ಮನಿಯ ನಾಟಕ ಮಂದಿರಗಳಲ್ಲಿ ಪ್ರಯೋಗ ನಾಟಕಕಾರ 'ಬೆಕ್ಟ್'ನ 3 ನಾಟಕಗಳನ್ನು ನೋಡುವ ಅವಕಾಶ ಲೇಖಕರಿಗೆ ದೊರೆತಿದೆ. ಗೀತ, ಗದ್ಯ, ಪದ್ಯ - ಸಮ್ಮಿಳಿತಗಳ ಈ ನಾಟಕಗಳು ಅಸಂಗತವೆನ್ನುವುದಕ್ಕಿಂತ ಸಮಾಜದ ವಿಡಂಬನೆಯ ಚಿತ್ರಣಗಳಂತಿವೆ.

ಜರ್ಮನಿಯ ಕಲಾವಿದರ ಭಾರತೀಯ ಹಿನ್ನೆಲೆಯ ಹಯವದನ ನಾಟಕದ ಲೇಖಕರಿಗೆ ಪರಿಣಾಮಕಾರಿ ಎನಿಸಿತು.

ಬ್ಯಾಲೆ, ಒಪೆರಾಗಳ ಅಭ್ಯಾಸದ ಶಿಕ್ಷಣ ಶಾಲೆಗಳು, ಸಂಗ್ರಹಾಲಯಗಳು -- ರೂಬೆನ್ಸ್, ಸಿಜಾನಂರತರ ಕಲಾವಿದರ ಕಾಣಿಕೆಗಳ ನ್ನೊಳಗೊಂಡಿವೆ.

'ಹೈಡಲ್‌ಬರ್ಗ್' ವಿಶ್ವವಿದ್ಯಾನಿಲಯ - ಸಂಸ್ಕೃತ ಮತ್ತು ಹಿಂದಿ ಸಾಹಿತ್ಯದ - ಅಧ್ಯಯನ ಕೇಂದ್ರಗಳನ್ನೊಳಗೊಂಡು ಲೇಖಕರ ಗಮನ ಸೆಳೆಯಿತು.

ಮಹಾಯುದ್ಧದ ಧಾಳಿಗಳಿಂದ ಬಲಿಯಾಗಿ ಸಂಪೂರ್ಣ ಚೇತನಗೊಂಡ ದೇಶ ಜರ್ಮನಿಯಾದರೆ ಜಾರ್ ಚಕ್ರವರ್ತಿಗಳವಿರುದ್ಧದ ಕ್ರಾಂತಿಯ ನಂತರದ ಕಮ್ಯೂನಿಸ್ಟ್ ಸರ್ಕಾರದ ಸಂಪೂರ್ಣ ಸ್ವಾಮ್ಯದ ಆಡಳಿತ ರಷ್ಯಾ ದೇಶದಲ್ಲಿ ಕಂಡಿದೆ.

ಇಲ್ಲಿನ ಪೀಟರ್ಸ್ ಬರ್ಗ ಹಿಂದಿನ ರಾಜ ವೈಭವದ ನೆನಪು ತಂದಿದೆ.

ಆದರೆ ಟಾಲ್‌ಸ್ಟಾಯ್, ಗಾರ್ಕಿಯರಂತಹ ಸಾಹಿತ್ಯದ ದಿಗ್ಗಜಗಳ ಜನ್ಮ ಭೂಮಿಯಂತೆಯೇ ಒಪೆರಾ, ಬ್ಯಾಲೆಗಳ ತವರೂರಾಗಿದೆ ರಷ್ಯಾ. ಇಲ್ಲಿ ಚೆಕೊಸ್ಕಿ ಜಾನಪದ ನೃತ್ಯಶಾಲೆ, ಕರಾಗೋಡು ನೃತ್ಯ ಅಕಾಡೆಮಿ, ಜಾನಪದ ಕಲೆಗಳ ಅಧ್ಯಯನ ಕೇಂದ್ರಗಳಾಗಿವೆ.

ಶ್ರದ್ಧೆ, ಸಾಂಪ್ರದಾಯಿಕತೆಯ ನೆಲೆಗಟ್ಟಿನ ಜೊತೆಗೆ ಜನರಂಜನೆಯ ಗುರಿಯನ್ನು ಹೊಂದಿರುವ ನಾಟಕ ಒಪೆರಾಗಳ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ

(ಪುಟ 13ಕ್ಕೆ)

# ಗೋಡೆ ಏರಿದಳು ಹುಡುಗಿ

ಡಾ. ಮಂಜುನಾಥ್

ಚಿಕ್ಕವಳಾದಾಗ ಚೆಲ್ವು - ಚೆಲ್ವು ಅಂತ ನೆರೆಹೊರೆಯವರು ಹೇಳ್ತಿದ್ರೂ, ಬೆಳೆದ ಮೇಲೆ ಅವಳು ಹಾಗೇನೂ ಆಗ್ತಿರ್ಲಿಲ್ಲ. ಹಾಗೆ ನೋಡಿದ್ರೆ, ಆ ದೊಡ್ಡ ಸಂಸಾರದಲ್ಲಿ ಯಾರ್ಯಾರು ಏನೇನು ಮಾಡ್ತಾ ಇದಾರೆಂತ ಇನ್ನೊಬ್ರಿಗೆ ಗೊತ್ತಾಗ್ತಿರ್ಲಿಲ್ಲ. ಹೇಳಿ ಕೇಳಿ ಹತ್ತು ಮಕ್ಕಳು. ಹೆಸರೇ ತಂದೆ ತಾಯಿಗೆ ಜ್ಞಾಪಕವಿರ್ತಾ ಇರ್ಲಿಲ್ಲ, ಅಂತ ನನಗೆ ಅನಿಸುತ್ತೆ. ಆದರೂ ಇಷ್ಟು ಜನ ಒಟ್ಟಿಗೆ ಅದು ಹೇಗೆ ಬೆಳೆದ್ರೂ ಅಂತ ಯೋಚಿಸಿದ್ರೇ ಭಯವಾಗುತ್ತೆ, ಈಗಿನ ಕಾಲದಲ್ಲಿ.

ಸರಿ ಎಲ್ಲರ ಜೊತೇಲೇ ಬೆಳೆದ್ಳು, ಇವಳೂ. ಹೆಣ್ಣು ಹುಡುಗಿಯರು ಹೆಚ್ಚಿದ್ರೂ, ಇವಳ ಮನಸ್ಸೆಲ್ಲಾ ಗಂಡು ಹುಡುಗರ ಆಟದ ಮೇಲೇ ''ಆ ಪಾಪೂಗೆ ಮಾತ್ರ ಬುಗುರಿ ತಂದುಕೊಡ್ತಾರೆ. ನಾನು ಕೇಳಿದ್ರೆ'' ''ನಿನಗ್ಯಾಕೆ ಹುಡುಗೀಗೆ'' ಅಂತ ರಾಗ ಎಳೀತಾರೆಂತ ಕೋಪ. ಬೆಳಿಗ್ಗೆ ಏಳೋದೇ ತಡ ಗೋಡೆ ಏರಿ, ಹಿತ್ಲಲ್ಲಿದ್ರೋ ಸೀಬೆ ಮರದ ಮೇಲೆ ಹತ್ತಿಕೂತು, ಒಂದು ಹೀಚೂ ಬಿಡದ ಹಾಗೆ ತರಿದು ಬಿಟ್ಟಿರೋಳು. ಆ ಮೇಲೆ ಹತ್ತಿದ ಆ ಪಾಪೂಗೆ, ಒಂದು ಕಸಗಟ್ಟೆ ಕಾಯಿ ಕೂಡ ಸಿಕ್ತಿರಲಿಲ್ಲ. ನಾನು ಪಕ್ಕದ ಮನೇಲಿ ಬೆಳೆದ ಹುಡುಗ, ಅವಳಿಗಿಂತ ಒಂದು ವರ್ಷಕ್ಕೆ ಚಿಕ್ಕವನು ಅಷ್ಟೆ. ಇವಳು ಸೀಬೆ ಮರದ ಮೇಲೆ ಹತ್ತಿ ತಿಂದ ಎಂಜಲು ಕಾಯಿ ನನ್ನ ಮೇಲೆ ಎಸೆದು ಹ್ಹಿ ಹ್ಹಿ ಹ್ಹಿ ಅಂತ ಕುದುರೆ ಕೆನೆದ ಹಾಗೆ ಕೆನೆಯೋಳು. ನಮ್ಮಮ್ಮ, ''ಆ ಪಾತಮ್ಮನೋರ್ಗೆ ಬುದ್ಧಿ ಇಲ್ಲ, ಒಂದು ಚೂರು ಗದರಿಸಿ ಹೇಳಬೇಡ್ವೆ'' ಅಂತ ಅಂದ್ಕೊಳ್ಳೋವ್ರು. ಸ್ಕೂಲಿಗೆ ಹೋಗಬೇಕಾದ್ರೆ, ಗೊಲ್ಲರ ಗೇರಿ ಮೇಲೇ ಹಾದು ಹೋಗಬೇಕು. ಇವಳು ಅಲ್ಲಿದ್ರೋ ಎಲ್ಲಾ ಕರುಗಳ ಬಾಲ ತಿರುಚಿ ತಿರುಚಿ ರೇಗಿಸ್ತಿದ್ದೋಳು. ಹಾಲಿನ ಮಾದಪ್ಪ, ಇವಳಿಗೆ ಹಿಡಿಶಾಪ ಹಾಕಿದ್ರೆ, ಅವಳ ಗಂಡ. ಒಂದು ದಿನ ಇವಳನ್ನ ಕೆರೆ ಏರಿತನಕ ಅಟ್ಟಿಸ್ಕೊಂಡು ಬಂದಿದ್ದ.

ಹೀಗಿದ್ದ ಹುಡುಗಿ, ಒಂದು ದಿನ ಇದ್ದಕ್ಕಿದ್ದ ಹಾಗೇ ಗಂಭೀರವಾಗಿ ಬಿಟ್ಳು. ಲಂಗದ ಮೇಲೆ ಒಂದು ದಾವಣಿ ಬಂತು, ಜೊಟ್ಟು ಜಡೆ, ಸ್ವಲ್ಪ ನೀಟಾಯ್ತು, ಏನಾಗ್ತಿದೆ ಅಂತ ನನಗೆ ಆ ವಯಸ್ಸಲ್ಲಿ ಅರ್ಥ ಆಗ್ದೇ ಇದ್ರೂ, ಇವಳು ಬೇರೆ ಏನೋ ಒಂದು ಥರಾ ಆಗ್ತಿದಾಳೆಂತ ಅನಿಸಿತ್ತು. ಆಮೇಲೆ ಅವಳನ್ನ ನಾನು ಯಾವ ಮರದ ಮೇಲೂ ಕಾಣ್ಲಿಲ್ಲ, ಯಾವ ಗೋಡೆ ಏರಿದ್ದೂ ನೋಡ್ಲಿಲ್ಲ.

ಹೈಸ್ಕೂಲಲ್ಲಿ ನಾನು ಅವಳ ಕ್ಲಾಸಮೇಟ್ ಆಗಿದ್ರೂ, ಸೆಕ್ಷನ್‌ಮೇಟ್ ಆಗಿಲ್ದೇ ಇದ್ದಿದ್ರಿಂದ ನಾನು ಅವಳನ್ನ ದಿನಾ ನೋಡ್ತಾನೂ ಇರ್ಲಿಲ್ಲಾ. ಹಾಗೆ ನೋಡಿದ್ರೆ, ಆ ವಯಸ್ಸಿನಲ್ಲಿ ನನಗೆ ಅವ್ಳನ್ನ ನೋಡ್ಬೇಕೂಂತಾನೂ ಅನ್ನಿಸ್ತಿರಲಿಲ್ಲ. ಯಾವಾಗ್ಲೂ ಯಾವುದೋ ಕೆಲವು ಮೆಳಗಣ್ಣು, ಹುಳುಕುಮುಖದ ಹುಡಿಗೀರ ಜೊತೆ ಗುಂಪಲ್ಲಿ ತಿರುಗ್ತಿದ್ಳು, ಅನ್ನೋದು ಸ್ವಲ್ಪ ನೆನಪು.

ಇನ್ನು ಕಾಲೇಜಿಗೆ ಬಂದನಂತರ, ಯಾವುದೋ ಒಂದು ಡಿಬೇಟ್‌ನಲ್ಲಿ, – ''ಮುಗ್ಧ ಹಳ್ಳಿಯವರನ್ನು, ಪಟ್ಟಣಿಗರು ಶೋಷಣೆ ಮಾಡುತ್ತಾರೆಯೇ'' ಅಂತ ಇರಬಹುದೇನೋ – ಹಳ್ಳಿಗರ ಪರವಾಗಿ ಮಾತಾಡಿದ್ಳು ಅಂತ ನೆನಪು. ಅವಳು ಏನು ಮಾತನಾಡಿದ್ಳು ಅಂತ ಜ್ಞಾಪಕ ಇಲ್ದೇ ಇದ್ರೂ, ಏನೋ ಜೋರು ಜೋರಾಗಿ, ಕೈಯ್ಯೆಲ್ಲಾ ಬೀಸಿಕೊಂಡು ಮಾತನಾಡಿದ್ದು ನೆನಪು. ಅದಕ್ಕೆ ಅವಳಿಗೆ ''ಸೀಮೆಎಣ್ಣೆ'' ಪ್ರಕಾಶ, ಬಜಾರಿ ಅಂತ ಹೆಸರಿಟ್ಟ್ರು. (ಕೆಂಪಗಿದ್ದ ಅಂತ ಅವನಿಗೆ ನಾವು 'ಸೀಮೆಎಣ್ಣೆ' ಅಂತ ಕರೀತಿದ್ವಿ) ಅಂತೂ ಬಜಾರಿ ಅನ್ನೋ ಹೆಸರು ಅವಳಿಗೆ ಖಾಯಂ ಆಗಿ ಹೋಯ್ತು. ಇನ್ನೊಂದ್ಸಲ, ಅವಳು ಯಾವುದೋ ಸಂಗೀತದ ಕಾಂಪಿಟೀಷನ್‌ನಲ್ಲಿ ಭಾಗವಹಿಸಿದ್ದ ನೆನಪು. 'ಪುಣ್ಯಭೂಮಿ' ಅಂತ ಕಾಣುತ್ತೆ, ಲತಾಮಂಗೇಶ್ಕರ್ ಅಜ್ಜಿ ಅನ್ನೋಹಾಗೆ, ಕುಯ್ ಅಂತ ಕಳ್ಳ ದನೀಲಿ ಹಾಡಿದ್ಳು, GSB. ಜಡ್ಜ್ ಆಗಿದ್ದವರು, ಇವಳಿಗೆ ಮೊದಲನೆ ಪ್ರೈಜ್ ಕೊಟ್ಟಿದ್ದಿಂದ, ಇವಳ ಕತ್ತು ಒಂದು ವರ್ಷದ ತನಕ ಸೆಟೆದುಕೊಂಡಿತ್ತು.

ನಾನು ಆಮೇಲೆ ಆ ಜಮಾನಾದ ಹುಡುಗರಿಗೆ ಅನುಗುಣವಾಗಿ, ಅಂಜನೇಯನಾದೆ. ಅಂದ್ರೆ ಇಂಜಿನಿಯರಿಂಗ್ ಓದಿದೆ. ನಾಲ್ಕು ವರ್ಷದ ಮೇಲೆ, ಯಥಾ ಪ್ರಕಾರ ಯಾವುದೋ ಸುಡುಗಾಡಲ್ಲಿ ಅಣೆಕಟ್ಟು ನಿರ್ಮಾಣಕ್ಕೆ ಹಾಕಿದ್ರು. ಅದು ಒಂದೇ ವರ್ಷದಲ್ಲಿ ಸಾಕಾದಾಗ, ಎಲ್ಲಾ ಜಾಹೀರಾತಿಗೂ ಅರ್ಜಿ ಹಾಕೋ ಅಭ್ಯಾಸವಾಯಿತು. ನಾನು ಸ್ವಲ್ಪ ಮುಖೇಡಿ ಅಂತ ಸ್ಕೂಲಲ್ಲೇ ಹೆಸರುವಾಸಿ ಯಾಗಿದ್ದರಿಂದ ಇಂಟರ್‌ವ್ಯೂನಲ್ಲಿ ತೇರ್ಗಡೆ ಯಾಗೋದು ಕಷ್ಟವಾಯ್ತು. ನಾನು ಒಂದು ಸಲ ನಾಗಪುರ್‌ಗೆ ಇಂಟರ್‌ವ್ಯೂಗೆ ಹೋದಾಗ, ಅಲ್ಲಿ ಶ್ರೀನಿವಾಸ ಮೂರ್ತಿ ಬಂದಿದ್ದ. ಅವನು ಬಲೇ ಘಾಟಿ. ಆದ್ರೆ ಮೂರ್ತಿ ನೋಡಿದ್ರೆ, ಥೇಟ್ ಹನುಮಂತರಾಯ. ''ಕೋಟೆಬಾಗಿಲು'' ಅಂತ ಹೆಸರಿದ್ದ ಈ ಮನುಷ್ಯ, ನನಗೆ ಬಹಳ ಟಿಪ್ಸ್‌ಕೊಟ್ಟ, ಇಂಟರ್‌ವ್ಯೂ ಬಗ್ಗೆ. ಮುಖ್ಯವಾಗಿ ಅವನ್ಹೇಳಿದ್ದು ಏನೂ ಅಂದ್ರೆ, ನೀನೇ ಕೆಲವು ಪ್ರಶ್ನೆಗಳನ್ನ ಕೇಳೋಕೆ ಶುರುಮಾಡು, ಬೋರ್ಡ್‌ನವರನ್ನ, ಅಂತ. ಅವರೇನಾದರೂ ಕಷ್ಟವಾದ ಪ್ರಶ್ನೆ ಕೇಳಿದ್ರೆ, ಇದು Out dated ಅಂತ ಸಲೀಸಾಗಿ ಹೇಳಿಬಿಟ್ಟು, ನಕ್ಕು ಬಿಡಬೇಕು ಅಂತ. ಇವುಗಳೆಲ್ಲಾ ಬಳಸಿದ ರಿಂದಲೋ ಏನೋ, ನನಗೆ ಅಣುಶಕ್ತಿ ಕೇಂದ್ರ ಮುಂಬಯಿಯಲ್ಲಿ, ಕೆಲಸ ಸಿಕ್ತು, ಅದರ ಡಿ.ಎ.ಪಿ. ವರ್ಕ್ ಶಾಪ್‌ನಲ್ಲಿ. ಕೆಲಸ ಏನು ಸುಮಾರು. ಸೊಗಸುಗಾರ ಪುಟ್ಟಸಾಮಿ ಅಂತ ಬೆಳಿಗ್ಗೆ 8-30ಕ್ಕೆ ಸಯಾನ್ ಸರ್ಕಲ್‌ನಲ್ಲಿ ಅವರ ಬಸ್‌ಗೆ ಕಾದು ತಿರುಗಿ 6ಕ್ಕೆ ಕಿಂಗ್‌ಸರ್ಕಲ್‌ನಲ್ಲಿ ಇಳಿದ್ರೆ, ಮೈಸೂರು ಅಸೋಸಿಯೇಷನ್‌ನಲ್ಲಿ ಹಾಜರು. ಅಲ್ಲಿ ಅಸೋಸಿಯೇಷನ್‌ನಲ್ಲಿ ನನ್ನ ಬ್ಯಾಚ್‌ನವರೇ ನಾಲ್ಕು ಜನ ಇದ್ರು. ಏನು ಕಾಫಿಮೇಲೆ ಕಾಫಿ, ಹರಟೆ, ಊಟವಾದ ಮೇಲೆ, ಸಯಾನ್‌ಗೆ ಎಲ್ರೂ ಗಲಾಟೆ ಮಾಡ್ಕೊಂಡು ನಡೆದುಕೊಂಡು ಹೋಗೋದೋ, ಅಥವಾ ಅರೋರಾ ಟಾಕೀಸ್‌ನಲ್ಲಿ ತಗಡುಗಳಿಗೆ ಔತಣ ನೀಡೋಕೋ ಹೋಗ್ತಾ ಇದ್ವಿ. ನಾಲ್ಕು ವರ್ಷ ಹೇಗೆ ಹೋಯ್ತು ಅಂತಾನೆ ಗೊತ್ತಾಗ್ಲಿಲ್ಲ.

ಒಂದು ದಿನ, ನಾರಾಯಣ ಅನ್ನೋನು, ಮೇಲುಗಡೆ ಡ್ರಾಮಾ ರಿಹರ್ಸಲ್ ನಡೀತಿದೆ, ಹೋಗಿ ನೋಡ್ಕೊಂಡು ಬರೋಣ ಅಂದ. ಡ್ರಾಮಾ ಅಂದ್ರೆ ನನಗೆ ಯಾವತ್ತೂ ಅಷ್ಟೇನೂ ಇರ್ಲಿಲ್ಲ. ಕ್ಲಾಸ್ ಸೋಷಿಯಲ್ಸ್‌ನಲ್ಲಿ ಮಾಡಿದಾಗ ನೋಡ್ತಿದ್ದೆ. ಎಲ್ಲರೂ ಹೋದರೂಂತ ನಾನೂ ಹೋದೆ. ಮೇಲುಗಡೆ ಎರಡನೆ ಮಹಡೀಲಿ, ಒಂದು ಆಡಿಟೋರಿಯಂ ಇತ್ತು. ಆಗ, ನೀವು ನೋಡಿಲ್ಲ ಅಂತ ಕಾಣುತ್ತೆ. ಒಂದು ದೊಡ್ಡ ಹಾಲ್, ಅದರಲ್ಲಿ ಒಂದು ಗೂಡು, ಅದಕ್ಕೆ ಸ್ಟೇಜ್ ಅನ್ನೋದ್ ನಾನು ಅಲ್ಲಿ ಹೋದಾಗ, ಸ್ಟೇಜ್ ಮೇಲೆ ಏನೋ ಮಾಡ್ತಿದ್ರೇನು, ರಿಹರ್ಸಲ್ ಅಂತ ಇದ್ದೆ. ಯಾವುದೋ ಓಡೋ ಸೀನ್ ನಡೀತಿತ್ತು. ದೀಪ ಆರಿಸ್ಬಿಟ್ಟು ಕತ್ತಲು ಮಾಡಿದ್ರು. ಕೆಲವರು ಒಂದು ಲಾಟೀನ್ ಹಿಡ್ಕೊಂಡಿದ್ರು, ಇನ್ನು ಯಾರೋ ಇಬ್ಬರು. ''ಬೇಗ ಬಾ ಭಾಗೀರಥಿ'' ಅಂತ ಬೇಗಬೇಗ ನಡಿತಿದ್ರು. ''ದೇಸಾಯಿ, ಒಂದು ಸಲ ಹೇಳಿದ್ರೆ ತಿಳ್ಕೋಬೇಕಪ್ಪ. ಹತ್ತು ಹತ್ತು ಸಲ ಹೇಳಿ ಹೇಳಿ ಗಂಟಲು ಒಣಗತ್ತೆ' ಅಂತ ಯಾರೋ ಕೂಗಿದ್ರು. ''ಸಾರಿ ಡಾಕ್ಟ್ರೇ'' ಅಂತ ಯಾರೋ ಹೇಳಿದ್ರು. ''ರಿಪೀಟ್'' ಅಂದ ತಕ್ಷಣ

ತಿರುಗಿ ''ಬೇಗ ಬಾ ಭಾಗೀರಥಿ, ಬೇಗ ಬೇಗ ಓಡು'', ''ಸ್ವಲ್ಪ ತಾಳಿ ಮಗು ಕೈಲಿದೆ''. ''ಇಲ್ಲಿ ಕೊಡು ಅದನ್ನ, ಓಡು'' ಅನ್ನೋ ಡೈಲಾಗ್ಸ್ ಕೇಳಿಸ್ತು. ಇಬ್ಬರು ಓಡಿದ್ರು. ಅವರ ಹಿಂದೇನೇ ಮೂರು ಜನ ಓಡಿದ್ರು ಕೋಲು ಹಿಡ್ಕೊಂಡು. ''ಅಯ್ಯೋ ರಾಮ. ಸ್ವಲ್ಪ ಐದು ಸೆಕೆಂಡ್ ಬಿಟ್ಟು ಓಡಿ ಅಂತ ಹೇಳಲಿಲ್ಲವೇ ಪ್ರಸಾದ್'' ಅಂತ ಯಾರೋ ರೇಗಿ ಕೂಗಿದ್ರು. ''Lights'' ಅಂತ ಕೂಗಿದ ಮೇಲೆ ಯಾರೋ ದೀಪ ಹಾಕಿದ್ರು. ಯಾರೋ ಇನ್ನೂ ಹುಡುಗ ಎಲ್ಲರ ಮೇಲೆ ಗುರ್‌ಗುರ್ ಅಂತ ರೇಗ್ತಾ ಇದ್ದ. ಎಲ್ಲರ ಮೇಲೂ ಎಗರಿ ಎಗರಿ ಬಿದ್ದ. ಎಲ್ಲರೂ ತೆಪ್ಪಗೆ ಬೈಸಿಕೊಂಡಿದ್ದು ನೋಡಿ ''ಅಯ್ಯೋ ಪ್ರಾಣಿಗಳಾ'' ಅಂತ ಅನ್ನಿಸ್ತು. ''ಡಾಕ್ಟರು ಎಷ್ಟು ಸಲ ಹೇಳಿದ್ರು, ಈ ದೇಸಾಯಿ ಅಥವಾ ಪ್ರಸಾದ್ ಟೈಮಿಂಗ್ ಸರಿಯಾಗಿ ಮಾಡೊಲ್ಲ '' ಅಂತ ಹಿಂದಿಂದ ಒಂದು ಹೆಣ್ಣು ಧ್ವನಿ ಕೇಳಿಸ್ತು. ಯಾವುದೋ ಪರಿಚಯದ ಧ್ವನಿ ಹಾಗಿದೆಯಲ್ಲಾ ಅಂತ ತಿರುಗಿದ್ರೆ, ಇವಳು ಅಲ್ಲಿ ಬೇರೆ ನಟರ ಜೊತೆ ನಿಂತಿದ್ಲು. ಅರೆ ಇವಳು ಬೊಂಬಾಯಿಗೆ ಯಾವಾಗ ಬಂದ್ಲು ಅಂತ ಅಂದ್ಕೊಂಡೆ. ಎಲ್ಲರಿಗೆ ಇವಳೂ ಆರ್ಡರ್ ಮಾಡ್ತಿದ್ಲು. ಆ ಡೈರೆಕ್ಟರ್ ಅನಿಸ್ಕೊಂಡ ಮನುಷ್ಯ ಅವಳಿಗೂ ಬೈದ. ''ಎಷ್ಟು ನಿಧಾನ, ಓಡು ಅಂದ್ರೆ ಆಮೆ ತೆವಳಿದ ಹಾಗೆ ತೆವಳ್ತಾಳೆ'' ಅಂತ. ಇನ್ಯಾರೋ, ''ಊಟ ಇಲ್ಲೇ ತರಿಸ್ತೀರೋ ಅಥವಾ ನಾವೇ ಕೆಳಗೆ ಹೋಗ್ಬೇಕೋ'' ಅಂತ ಗೊಣಗಿದ್ರು. ಅಂತೂ ಒಂದು 30-40 ಜನ ಅಲ್ಲಿ ಆ ನಾಟಕದ ರಿಹರ್ಸಲ್‌ನಲ್ಲಿ ಇದ್ದ ಹಾಗಿತ್ತು. ಇಷ್ಟು ದೊಂಬಿ ನಾನು ಯಾವತ್ತೂ ನೋಡಿರ್ಲಿಲ್ಲ.

ಇವಳೂ ಧಡಧಡ ಅಂತ ಕಾಲುಕುಟ್ಟಿಕೊಂಡು ಮುಂದೆ ಬಂದು, ''ಎಷ್ಟು ಸಲ ರಿಪೀಟ್ ರಿಪೀಟ್ ಅಂತ ಮಾಡಿಸ್ತೀರಾ? ನಾವು ದೂರದಿಂದ ಬರೋವ್ರು, ಹೀಗೆ ಮಾಡಿದ್ದೇ ಮಾಡಿದ್ರೆ ಬೆಳಿಗ್ಗೆ ತನಕಾ ಇಲ್ಲೇ ಇರ್ಬೇಕಾಗುತ್ತೆ'' ಅಂತ ಕೂಗಿದ್ಲು. ಆ ಡೈರೆಕ್ಟರ್ ಅನ್ನೋವ್ನು, ಇವಳಿಗಿಂತ ಒಡ್ಡ ಅಂತ ಕಾಣುತ್ತೆ, ನೀನೆಷ್ಟು ಸಲ ಮಾಡಿದ್ದೇ ಮಾಡ್ತೀಯಾ ಹೇಳು? ಸರಿಯಾಗಿ ಬಾಯಿಬಿಡೆ ಅಂದ್ರೆ, ಕತ್ತು ಬಿಗ್ಕೊಂಡು, ಕುಯ್‌ಕುಯ್. ಅಂತೀಯಾ'' ಅಂತ ಗುರ್ ಅಂದ. ''ಇಲ್ಲೇ ಊಟ ಬಂತಪ್ಪ, ಬೇಗ ಮಾಡಿಬಿಟ್ಟು ರಿಹರ್ಸಲ್ ಮುಂದಕ್ಕೆ ಮಾಡೋಣ'' ಅಂದ್ರೂ ಇನ್ಯಾರು. ಎಲ್ರೂ ಊಟ ಮಾಡೋವಾಗ ಇವಳು ನಾನು ಅಲ್ಲಿ ನಿಂತಿರೋದು ನೋಡಿ ಬಂದಳು. ''ನೀನಲ್ಲಿ?'' ಅಂದ್ಲು. ''ಈಗ ಬೊಂಬಾಯಿಗೆ ಬಂದಿದೀನಿ, ನಾಲ್ಕು ವರ್ಷವಾಯ್ತು'' ಅಂದೆ.

''ನಾಲ್ಕು ವರ್ಷವಾಯಿತೇ? ಹಾಗಾದ್ರೆ ಅಸೋಸಿಯೇಷನ್‌ಗೆ ಈಗ ಮೆಂಬರ್ ಆದ್ಯಾ?'' ಅಂದ್ಲು.

''ಇಲ್ಲ ನಾಲ್ಕು ವರ್ಷದಿಂದ ಮೆಂಬರು'' ಅಂದೆ.

ಅವಳಿಗೆ ನನ್ನ ನೋಡಿ ಸಂತೋಷವಾಯ್ತು. ಅನ್ನೋದು ಅವಳು ನನ್ನನ್ನ ಅಲ್ಲಿ ಎಲ್ಲಾ ಡ್ರಾಮಾದವರಿಗೂ introduce ಮಾಡಿದ ರೀತೀಲೇ ಗೊತ್ತಾಯ್ತು. ಅವಳ ಗಂಡನಿಗೂ ಪರಿಚಯ ಮಾಡಿಕೊಟ್ಳು. ಮಹಾರಾಯ್ತಿ ತನ್ನ ಮಕ್ಕಳನ್ನೂ ನಾಟಕಕ್ಕೆ ಸೇರಿಸಿಕೊಂಡಿದ್ಲು, ಒಳ್ಳೇ family incorporated ಅನ್ನೋ ಹಾಗೆ, ಮನೆಗೆ ಊಟಕ್ಕೆ ಬಾ, ಅಂತ ಮನೆ ಅಡ್ರೆಸ್ ಕೊಟ್ಳು.

ಅಲ್ಲಿಂದ ಮತ್ತೆ ಶುರುವಾಯ್ತು ಅವಳ ಸ್ನೇಹ. ಅಸೋಸಿಯೇಷನ್‌ನಲ್ಲೂ ಎಲ್ರ ಮೇಲೆ ಜೋರು ಮಾಡ್ತಿದ್ಲು. ಎಲ್ಲಾ ಕಾರ್ಯಕ್ರಮದಲ್ಲೂ ಇವಳು ಇದ್ದೇ ಇರ್ಬೇಕು, Talents Day ನಲ್ಲೂ ಇವಳೇ, Sports Dayನಲ್ಲೂ ಇವಳೇ, Picnicನಲ್ಲೂ ಇವಳೇ. ಅಬ್ಬಾ, ಅಬ್ಬಾ, ಖಂಡಾಲಾಗೆ ಪಿಕ್‌ನಿಕ್ ಹೋದಾಗ, ಆ ಬಸ್‌ನಲ್ಲಿ ಇವಳದ್ದೇ ಕಿರುಚಾಟ, ಅಂತಾಕ್ಷರಿ ಅನ್ನೋ ಹೆಸರಲ್ಲಿ ಕೂಗಿ ಕೂಗಿ ಧ್ವನಿ ಗೊಗ್ಗರಧ್ವನಿ ಆಗಿತ್ತು. ವಾಪಸ್ ಬರೋ ಹೊತ್ತಿಗೆ.ಅವಳ ಜೊತೆ ಇದ್ರೆ ಯಾರಿಗೆ ಬೇಕಾದ್ರೂ ಹುಮ್ಮಸ್ಸು ಮೂಡಿಸ್ತಿದ್ಲು. 'ದೇವರು ಒಂದೇ ವ್ಯಕ್ತಿಗೆ ಎಷ್ಟೊಂದು ಜೀವ ತುಂಬಿಟ್ಟಿದಾನೆ' ಅಂತನ್ನಿಸ್ತಿತ್ತು. ನನ್ನೂ ಅವಳು ನಾಟಕಕ್ಕೆ ದಾಖಲು ಮಾಡಿದ್ಲು. ಇನ್ನು ನಾಲ್ಕು ವರ್ಷ ನನಗೆ, ನಾನು ಊರಿಂದ ಹೊರಗೆ, ಕರ್ನಾಟಕದ ಹೊರಗೆ ಇದ್ದೀನಿ. ಅನ್ನೋದೇ ಗೊತ್ತಾಗ್ಲಿಲ್ಲ, ಅಷ್ಟು ಸಲೀಸಾಗಿ ಕಾಲ ಉರುಳ್ತು, ನನಗೆ ಸ್ವಲ್ಪ ಹಿಂಜರಿಕೆ ಅಂತ ಆಗಲೇ ಹೇಳಿದ್ನಲ್ಲ, ಆದರೆ ನನಗೆ ಈ ನಾಲ್ಕು ವರ್ಷದಲ್ಲಿ ಒಳ್ಳೇ ಗ್ರೂಪ್ ಥೆರಪಿ ಆಯ್ತು. ನನ್ನ ಪರ್ಸನಾಲಿಟೀನೇ ಬದಲಾಯ್ತು. ನನಗೆ ಒಬ್ಬ ಅಕ್ಕ ಸಿಕ್ಕಹಾಗೆ ಆಗಿತ್ತು, ಅಷ್ಟು ಅಕ್ಕರೆಯಿಂದ ನೋಡಿಕೊಂಡಳು. ಅವಳು ಯಾವಾಗ್ಲೂ ನಗ್ತಾ ನಗ್ತಾ ಇರೋಳು. ಎಲ್ಲರಿಗೂ ಅಚ್ಚು ಮೆಚ್ಚು.

ಆಮೇಲೆ ನನಗೆ ಅಮೆರಿಕಾಗೆ ಹೋಗೋ ಅವಕಾಶ ಸಿಕ್ತು, ಹೋದೆ. ಅಲ್ಲಿ ವಾತಾವರಣ ಬೇರೆ. ಇಲ್ಲಿ ಹಾಗೆ ಇಲ್ಲ. ಎಲ್ಲರೂ ಅವರವರದ್ದೇ ಕೆಲಸದಲ್ಲಿ ತೊಡಗಿರ್ತಾರೆ, ದಿನಾ ಮೀಟ್ ಮಾಡೋ ಛಾನ್ಸ್ ಇಲ್ಲ. ಒಂದು ತರಹ ಬೋರು. ಆಗಾಗ ನನಗೆ ಅವಳ ಸುದ್ದಿ ತಿಳಿತಿತ್ತು. ಪ್ರತಿವರ್ಷ ನನ್ನ ಹುಟ್ಟಿದ ಹಬ್ಬ ನೆನಪಿಟ್ಕೊಂಡು ಕಾರ್ಡ್ ಕಳಿಸ್ತಿದ್ಲು. ನಾನು ಮದುವೆ ಮಾಡ್ಕೊಂಡು ಆರು ವರ್ಷವಾಯ್ತು. ಆಗ ಅವಳು ನನ್ನ ಮದುವೆಗೆ ಮೈಸೂರಿಗೆ Special ಆಗಿ ಬಂದು, ಹಾಡಿ, ಪ್ರೆಸೆಂಟ್ ಕೊಟ್ಟು, ನನ್ನ ಹೆಂಡತಿ ಸ್ನೇಹ ಮಾಡ್ಕೊಂಡು ಹೋದಳು.

ಮೊದಲು ಬೊಂಬಾಯಿ ಬಂದು ಅಮೆರಿಕಾಗೆ ಹೋಗಬೇಕಾಗಿತ್ತು. ಈಗ ಬೆಂಗಳೂರಿಂದಾಗಲೇ ಹೋಗಬಹುದಲ್ಲ. ಹಾಗಾಗಿ ಆರು ವರ್ಷವಾದ ಮೇಲೆ ನಾನು ಪುನಃ ಬೊಂಬಾಯಿಗೆ ಬಂದೆ. ನನ್ನ ಮಗನ್ನ ಅವಳಿಗೂ ಅವಳ ಮಕ್ಕಳಿಗೂ ಪರಿಚಯ ಮಾಡಕೊಡಬೇಕು ಅಂತ ಅವಳ ಮನೆಗೆ ಟ್ಯಾಕ್ಸಿ ಮಾಡ್ಕೊಂಡು ಭಾನುವಾರ ಹೋದ್ವಿ.

ಬಾಗಿಲು ಬೆಲ್ ರಿಂಗ್ ಮಾಡಿದಾಗ ಅವಳ ಎರಡನೇ ಮಗ ಬಾಗಿಲು ತೆಗೆದು 'ಮಾಮಾ ಬನ್ನಿ' ಅಂದ. ಅವಳ ಗಂಡನೂ ಮನೇಲೇ ಇದ್ದ. ಚೆನ್ನಾಗಿ ಮಾತನಾಡಿದ ಮೇಲೆ, ಇವಳನ್ನ ಕಾಣದೆ 'ಮನೇಲಿಲ್ವಾ? ಹಾಗಾದ್ರೆ ಕಾಲಿಗೆ ಚಕ್ರ ಹಾಕ್ಕೊಂಡು ಹೋಗಿರ್ಬೇಕು ''ಅಂತ ನಗ್ತಾ ಹೇಳಿದೆ. ಅವಳ ಗಂಡ. ಕಣ್ಣನಲ್ಲಿ ನೀರು ತುಂಬಿಕೊಂಡು, ಸುಮ್ಮನೆ ಗೋಡೆಯ ಕಡೆಗೆ ಕೈ ತೋರಿದ. ನಾನು ಆತಂಕದಿಂದ ತಲೆ ಎತ್ತಿ ನೋಡಿದೆ.

ಅಲ್ಲಿ ಅವಳು ಗೋಡೆಯೇರಿ ತೂಗಾಡುತ್ತಿದ್ದಳು. ಆದರೆ ಈಗ ಅವಳ ಬಾಯಲ್ಲಿ ಸೀಬೆಕಾಯಿ ಇರಲಿಲ್ಲ, ಕೇವಲ ನಗು ಮಿಂಚಿತ್ತು. ನನ್ನ ಕಣ್ಣಲ್ಲಿ ಹನಿ ತುಂಬಿತ್ತು. ಕತ್ತು ಬಿಗಿದಿತ್ತು.

●

TRIMURTI
JEWELLERS
GOLD AND DIAMOND
ORNAMENTS

460/4, Venkatesh Niwas,
Ground Floor,
Bhaudaji Road,
Opp Mysore Association,
Matunga (C.Rly.)
Mumbai-400 019.
Phone : 402 34 85

# ಪು.ಲ. ದೇಶಪಾಂಡೆ ಒಂದು ಪರಿಚಯಾತ್ಮಕ ಶ್ರದ್ಧಾಂಜಲಿ

ಎನ್. ಜಿ. ನವಿಲೇಕರ್

''ಪು.ಲ. ದೇಶಪಾಂಡೆ'' ಈ ಹೆಸರು ಕೇಳದ ಮರಾಠಿ ಮನುಷ್ಯ ಬಹುಶಃ ಇನ್ನೂ ಹುಟ್ಟಬೇಕಾಗಿದೆ. ಕಳೆದ ಐವತ್ತು ವರ್ಷಕ್ಕೂ ಹೆಚ್ಚುಕಾಲ ನಾಟಕಕಾರ, ನಟ, ಹಾಸ್ಯ ಲೇಖಕ, ಗಾಯಕ, ಸಮಾಜ ಸುಧಾರಕ ಇತ್ಯಾದಿ ಇತ್ಯಾದಿ ರೂಪಗಳಲ್ಲಿ ವಿಜೃಂಭಿಸಿದ ಮಹಾರಾಷ್ಟ್ರದ ಅಕ್ಕರೆಯ ಪುತ್ರ, ಕಳೆದ ಜೂನ್ ಹನ್ನೆರಡರಂದು ಪುಣೆಯಲ್ಲಿ ಕೊನೆಯುಸಿರೆಳೆದಾಗ ಸಂಪೂರ್ಣ ಮಹಾರಾಷ್ಟ್ರವೇ ಕಣ್ಣೀರಿಟ್ಟಿತು. ಪ್ರತಿಭೆ ಹಾಗೂ ಸವ್ಯಸಾಚಿತ್ವದಲ್ಲಿ ನಮ್ಮ ಶಿವರಾಮ ಕಾರಂತರಿಗೆ ಹೋಲಿಸಬಹುದಾದ ಈ ಮಹಾರಾಷ್ಟ್ರದ ಪ್ರತಿಮಾಪುರುಷನ ಬಗ್ಗೆ ಕನ್ನಡಿಗರಿಗೆ ಬಹುಶಃ ಹೆಚ್ಚು ಪರಿಚಯವಾಗಿಲ್ಲ.

''ಪುಲ'' ಎಂದೇ ಮಹಾರಾಷ್ಟ್ರದಲ್ಲಿ ಮನೆಮಾತಾದ ಪುರುಷೋತ್ತಮ ಲಕ್ಷ್ಮಣ ದೇಶಪಾಂಡೆ ಹುಟ್ಟಿದ್ದು ಮುಂಬಯಿಯ ಗಾವ್‌ದೇವಿಯ ಮಹಾರವೊಂದರಲ್ಲಿ ನವೆಂಬರ್ ೮, ೧೯೧೯ರಂದು. ಸಾಹಿತ್ಯ, ಸಂಗೀತ, ನಾಟಕಗಳಲ್ಲಿ ಆಸಕ್ತಿಯಿದ್ದ ತಂದೆ ತಾಯಿಯೊಂದಿಗೆ ಮಧ್ಯಮವರ್ಗದ ಪರಿಸರದಲ್ಲಿ ಬೆಳೆದದ್ದು ಗೋರೆಗಾಂವ್ ಮತ್ತು ವಿಲೆಪಾರ್ಲೆ ಉಪನಗರಗಳಲ್ಲಿ, ದೇಶಪಾಂಡೆ ಮನೆತನದವರು ಮೂಲತಃ ಬೆಳಗಾವಿ ಹತ್ತಿರದ ಜಂಗಮಹಟ್ಟಿ ಎಂಬ ಊರಿನಿಂದ ಬಂದವರು. ತಾಯಿಯ ತಂದೆ ಮೂಲತಃ ಕಾರವಾರದವರು. ಚಿಕ್ಕಂದಿನಲ್ಲಿ ಆಗಾಗ, ರಜಾದಿನಗಳಲ್ಲಿ ಹೋಗುತ್ತಿದ್ದ ಕಾರವಾರದ ಪರಿಸರ ಪುಲ ಮನಸ್ಸಿನಲ್ಲಿ ವಿಶೇಷ ಸ್ಥಾನ ಪಡೆದುಕೊಂಡು ಕೊನೆಯವರೆಗೂ ಇತ್ತು. ''ಕಾರವಾರದ ಆ ದಿನಗಳ ನೆನಪಾದರೆ ನನ್ನ ಬಾಲ್ಯ ಮರುಕಳಿಸುತ್ತದೆ'' ಎಂದು ಮುಂದೊಮ್ಮೆ ಭಾಷಣವೊಂದರಲ್ಲಿ ಅವರೇ ಹೇಳಿದ್ದುಂಟು.

ಖ್ಯಾತನಾಟಕಕಾರ, ಗಾಯಕ ಬಾಲಗಂಧರ್ವರ ಭಕ್ತರಾಗಿದ್ದ ತಂದೆ ಲಕ್ಷ್ಮಣರಾವ್ ದೇಶಪಾಂಡೆ ಯವರ ಆಯುಷ್ಯ ಮಗನಿಗೆ ಬಾಲಗಂಧರ್ವರ ಎಲ್ಲಾ ನಾಟಕಗಳನ್ನು ತೋರಿಸುವುದರಲ್ಲಿ ಹಾರ್ಮೋನಿಯಂ ಕೊಡಿಸುವುದರಲ್ಲಿ, ಮಗ ದೊಡ್ಡ ಗಾಯಕನಾಗಬೇಕು ಎಂದು ಕನಸು ಕಾಣುವುದರಲ್ಲಿಯೇ ಕಳೆದುಹೋಯಿತು. ಹಾರ್ಮೋನಿಯಂ ಬಾರಿಸಿ ಬಾಲಗಂಧರ್ವರಿಂದ ಬೆನ್ನು ತಟ್ಟಿಸಿಕೊಂಡಾಗ ಪುಲ ಇನ್ನೂ ಹನ್ನೊಂದು ವರ್ಷದ ಬಾಲಕ. ಮುಂಬಯಿಯಲ್ಲಿ ಎಲ್.ಎಲ್.ಬಿ. ಮುಗಿಸಿ ಪುಣೆಯ ಫರ್ಗ್ಯುಸನ್ ಕಾಲೇಜಿನಲ್ಲಿ ಬಿ.ಎ. ಪೂರೈಸಿದ ಪು.ಲ. ಕಲೆಕ್ಟರ್ ಕಚೇರಿ, ಮೋಟರ್ ವೆಹಿಕಲ್ ಕಚೇರಿ, ಇನ್ಕಂಟ್ಯಾಕ್ಸ್ ಆಫೀಸ್ ಇತ್ಯಾದಿ ಸರ್ಕಾರಿ ಇಲಾಖೆಗಳಲ್ಲಿ ಕೆಲಸ ಮಾಡಿದರೂ ಅಲ್ಲಿ ಎಲ್ಲಿಯೂ ಖಾಯಮ್ಮಾಗಿ ನಿಲ್ಲದೇ ಇದ್ದದ್ದು ಮರಾಠಿಗರ ಸೌಭಾಗ್ಯ.

ಇವರ ವಿಶೇಷ ಪ್ರತಿಭೆಯನ್ನು ಗುರುತಿಸಿದ ಚಿಂತಾಮಣ ರಾವ್ ಕೊಲ್ಹಾಟ್ಕರರು ತಮ್ಮ 'ಲಲಿತ ಕಲಾ ಕುಂಜ' ನಾಟಕ ಮಂಡಳಿ ಸೇರಲು ಆಹ್ವಾನಿಸಿದರು. ಈ ಕಂಪನಿಯಲ್ಲಿ ಸಿಕ್ಕ ವಿವಿಧ ನಾಟಕಗಳಲ್ಲಿ ಪಾತ್ರ ವಹಿಸುವ ಅವಕಾಶ ಪುಲ ನಾಟಕ ರಂಗದಲ್ಲಿ ಬಲವಾಗಿ ಬೇರು ಬಿಡಲು ಸಹಾಯಕವಾಯಿತು. ೧೯೪೬ರಲ್ಲಿ ದಾದರಿನ ಓರಿಯಂಟಲ್ ಹೈಸ್ಕೂಲ್‌ನಲ್ಲಿ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದಾಗ ಅಲ್ಲಿ ಸಹೋದ್ಯೋಗಿಯಾಗಿದ್ದ ಸುನೀತಾ ಠಾಕೂರ್ ಎಂಬ ತರುಣಿ ಮುಂದೆ ಪುಲ ಕೈಹಿಡಿದು ೫೪ ವರ್ಷದ ಸುದೀರ್ಘ ಒಡನಾಟದಲ್ಲಿ ಪತ್ನಿ, ಗೃಹಿಣಿ, ಸೆಕ್ರಟರಿ ಎಲ್ಲವೂ ಆದರು. ಸಂಸಾರದ ಸೂತ್ರವನ್ನು ಸುನೀತಾರ ಕೈಯಲ್ಲಿಟ್ಟ ಪುಲ ಲಲಿತ ರಂಗದಲ್ಲಿ ಸಂಚಾರ ಹೂಡಲು ಮುಕ್ತರಾದರು.

ಪುಲ ಬಹುಮುಖಿ ಪ್ರತಿಭಾವಂತರಾದರೂ ಅವರ ಹಾಸ್ಯ ಸಾಹಿತ್ಯ ಜನಪ್ರಿಯತೆಯಲ್ಲಿ ಮೊದಲ ಸ್ಥಾನ ಪಡೆಯುತ್ತದೆ ಎಂದು ಹೇಳಬಹುದು. ಬರಿಯ ಹಾಸ್ಯ ಸಾಹಿತ್ಯವಷ್ಟೇ ಅಲ್ಲ, ಅವರ ಭಾಷಣಗಳಲ್ಲಿ, ನಾಟಕ ಸಿನೆಮಾಗಳಲ್ಲಿ, ಖಾಸಗಿ ಗೋಷ್ಠಿಗಳಲ್ಲಿ ಕೂಡ ಅವರ ವಿನೋದ ಪ್ರವೃತ್ತಿ ಮಿಂಚುತ್ತಿತ್ತು. ಇಂಗ್ಲೀಷಿನ ಹಾಗೂ ನಿಂದ ಪ್ರಭಾವಿತರಾಗಿದ್ದ ಪುಲ ತಮ್ಮ ವಿಶಿಷ್ಟ ದೃಷ್ಟಿಯಿಂದ ದೈನಂದಿನ ಜನಸಾಮಾನ್ಯರ ಜೀವನದಲ್ಲಿ ಸುಪ್ತವಾಗಿರುವ ವಿನೋದವನ್ನು ಹೆಕ್ಕಿ ತೆಗೆದು ತಮ್ಮ ಪ್ರತಿಭೆಯ ಪಾಕ ಶಾಲೆಯಲ್ಲಿ ಪಕ್ವಗೊಳಿಸಿ ಸಾಹಿತ್ಯ ರೂಪದಲ್ಲಿ ಅದನ್ನು ಉಣಬಡಿಸುತ್ತಿದ್ದರು.

ಬಾಲ್ಯದಿಂದಲೇ ವಿಡಂಬನ ಪ್ರವೃತ್ತಿಯನ್ನು ಬೆಳೆಸಿಕೊಂಡುಬಂದಿದ್ದ ಪುಲ ಕೆಲವು ವಿನೋದೀ ನಾಟಕಗಳನ್ನು ರಚಿಸುತ್ತಾ ಬಂದರೂ ಅವರಿಗೆ ಅತ್ಯಂತ ಜನಪ್ರಿಯತೆಯನ್ನು ತಂದು ಕೊಟ್ಟ ಹಾಸ್ಯಕೃತಿ ಎಂದರೆ ''ಬಟಾಟ್ಯಾಚಿ ಚಾಳ್'' ಮುಂಬಯಿಯ ಕಾಲ್ಪನಿಕ ಚಾಳೊಂದರ ನಿವಾಸಿಗಳು, ಅವರ ಸ್ವಭಾವ ವೈಚಿತ್ರ್ಯ, ಅಲ್ಲಿಯ ಘಟನೆಗಳು ಇವನ್ನೆಲ್ಲ ಅತ್ಯಂತ ನೈಜವಾಗಿ ಹಾಗೂ ವಿನೋದಾತ್ಮಕವಾಗಿ ತೆರೆದಿಟ್ಟ ಈ ಲೇಖನಮಾಲೆ ಮೊದಲು ಬಿಡಿ ಬಿಡಿ ಲೇಖನಗಳಾಗಿ ದೀಪಾವಳಿಸಂಚಿಕೆಗಳಲ್ಲಿ ಪ್ರಕಟಗೊಂಡದ್ದು, ೧೯೫೮ರಲ್ಲಿ ಪುಸ್ತಕರೂಪದಲ್ಲಿ ಹೊರಬಂತು. ಮುಂದೆ ಅದರ ಏಕಪಾತ್ರಾಭಿನಯದ (ಪುಲ ಸ್ವತಃ ಏಕಪಾತ್ರಿ!) ರೂಪದಲ್ಲಿ ರಂಗದ ಮೇಲೆ ತಂದಾಗ, ಅದು ಎಷ್ಟು ಪ್ರಸಿದ್ಧವಾಯಿತು ಎಂದರೆ ''ಒಬ್ಬರಿಗೆ ಕೇವಲ ನಾಲ್ಕು ಟಿಕೆಟ್ ಮಾತ್ರ'' ಎಂದು ಥಿಯೇಟರಿನ ಬುಕಿಂಗ್ ಕೌಂಟರ್ ಹೊರಗೆ ಬೋರ್ಡ್ ಹಾಕಬೇಕಾಗಿ ಬಂತು! ಇದರ ಕೆಲ ಲೇಖನಗಳು ಮುಂದೆ ಪಠ್ಯಪುಸ್ತಕದಲ್ಲೂ ಸೇರ್ಪಡೆಯಾದವು. ನಲವತ್ತಕ್ಕೂ ಹೆಚ್ಚು ವರ್ಷ ಹಿಂದಿನದಾದರೂ ಇಂದಿಗೂ ಈ ''ಬಟಾಟ್ಯಾಚಿ ಚಾಳ್'' ಮರಾಠಿ ಜನರ ಮನಸ್ಸಿನಲ್ಲಿ ಗಟ್ಟಿಯಾಗಿ ಕುಳಿತುಬಿಟ್ಟಿದೆ. ಮುಂದೆ ಪುಲ ರಚಿಸಿದ ''ವಾರ್ಯಾವರಚಿ ವರಾತ್'', ''ಅಸಾ ಮೀ ಅಸಾಮಿ'', ''ವಟವಟ'', ''ಹಸವಣೂಕ್'', ಇತ್ಯಾದಿ ಕೃತಿಗಳು ಕೂಡ ಜನಮನ್ನಣೆಯನ್ನು ಪಡೆದವು.

ಪುಲ ವಿಡಂಬನೆ ಮಾಡಿದ ವಿಷಯಗಳು ಒಂದೇ ಎರಡೇ... ಜನ ಸಾಮಾನ್ಯರ ಮಾತಾಡುವ ವೈಖರಿ, ಶಾಲಾ ಮಕ್ಕಳು, ಶಿಕ್ಷಕರು, ರಾಜಕಾರಣಿಗಳು, ಪೋಲೀಸರು ಆಧುನಿಕ ಜೀವನಶೈಲಿ, ಆಂಗ್ಲೀಕರಣಗೊಂಡ ಮರಾಠಿ ಎಲ್ಲವೂ ಅವರ ವಿಡಂಬನೆಗೆ ತುತ್ತಾದವು. ಅಷ್ಟೇ ಏಕೆ, ಭಾಷೆಯನ್ನು, ಪದಗಳನ್ನು ದುಡಿಸಿಕೊಳ್ಳುವುದು, ಅವುಗಳಿಂದ ಬೇರೆಯದೇ ಅರ್ಥ ಹೊರಡಿಸುವುದು ಇವುಗಳಲ್ಲಿ ಅವರು ಸಿದ್ಧಹಸ್ತರಾಗಿದ್ದರು. ಸವಾಯಿ ಗಂಧರ್ವರ ಶಿಷ್ಯರಾಗಿದ್ದ ಭೀಮಸೇನ ಜೋಶಿಯವರಿಗೆ ''ಹವಾಯಿ ಗಂಧರ್ವ'' (ಸಂಗೀತ ಕಛೇರಿಗಳಿಗೆ ದೇಶಾದ್ಯಂತವಿಮಾನದಲ್ಲಿ ಸಂಚರಿಸುತ್ತಿದ್ದುದ್ದಕ್ಕಾಗಿ!), ಹವಾಯಿ ಸುಂದರಿಯರುಗಳು ''ದವಾಯಿ ಸುಂದರಿಯರು'' ಇತ್ಯಾದಿ.

ಪುಲ ಹಾಸ್ಯ ಸಾಹಿತ್ಯದಲ್ಲಿ ಹೆಸರು ಮಾಡಿದ್ದೇನೋ ಸರಿ. ಆದರೆ ಸಾಹಿತ್ಯದ ಇತರ ಪ್ರಕಾರಗಳಿಗೆ ಅವರಿತ್ತ ಕೊಡುಗೆ ಅಷ್ಟೇ ಗಣನೀಯವಾದದ್ದು. ಕಾಲೇಜು ದಿನಗಳಿಂದಲೇ ಪ್ರಾರಂಭವಾದ ಅವರ ಬರಹ ಮುಂದೆ ಆಕಾಶವಾಣಿ,

ಸಿನೇಮಾ ಇತ್ಯಾದಿ ಮಾಧ್ಯಮಗಳಿಗೂ ವಿಸ್ತರಿಸಿತು. ೧೯೫೭ರಲ್ಲಿ ಪ್ರಯೋಗ ಕಂಡ ಅವರ ನಾಟಕ ''ತುಝೆ ಆಹೆ ತುಜಪಾಶಿ'' ಪುಲರಲ್ಲಿ ಅಡಗಿದ್ದ ನಾಟಕಕಾರನನ್ನು ಜಗತ್ತಿಗೆ ದೊಡ್ಡ ರೀತಿಯಲ್ಲಿ ಪರಿಚಯ ಮಾಡಿಸಿತು. ಅದೇ ವರ್ಷ ಪ್ರಕಟವಾದ ಅವರ ಇನ್ನೂ ಮೂರು ನಾಟಕಗಳಿಂದ ಮರಾಠಿ ನಾಟಕ ಸಾಹಿತ್ಯದಲ್ಲಿ ಅವರು ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡರು.

ಅವರು ಮುಟ್ಟದ ಸೊಪ್ಪಿಲ್ಲವಾದರೆ ಪುಲ ಮುಟ್ಟದ ಸಾಹಿತ್ಯ ಪ್ರಕಾರವಿರಲಿಲ್ಲ. ಹಾಸ್ಯ, ಲಲಿತ ಪ್ರಬಂಧ, ಪ್ರಹಸನ, ನಾಟಕ, ವ್ಯಕ್ತಿಚಿತ್ರ ಪ್ರವಾಸಚಿತ್ರಣ ಇತ್ಯಾದಿ ಅನೇಕ ದಿಕ್ಕಿನಲ್ಲಿ ಪುಲ ಪ್ರತಿಭೆ ಹರಿದಾಡಿತು. ಅವರ ಸಾಹಿತ್ಯ ಸೃಷ್ಟಿ ೧೪ ನಾಟಕ, ೨ ಬಾಲನಾಟ್ಯ, ೪ ಪ್ರವಾಸ ಚಿತ್ರ, ೧೩ ಹಾಸ್ಯ ಕೃತಿ, ೬ ವ್ಯಕ್ತಿ ಚಿತ್ರಗಳ ಸಂಕಲನ ಇತ್ಯಾದಿ ಇತ್ಯಾದಿಗಳ ದೊಡ್ಡ ಪಟ್ಟಿಯಾಗಿ ಬೆಳೆಯಿತು. ಅವರ ಅನೇಕ ನಾಟಕಗಳು ಬೇರೆ ಭಾಷೆಗಳ ಕೃತಿಗಳ ರೂಪಾಂತರ ಅಥವಾ ಅನುವಾದ. ಉದಾ ಅವರ ''ಅಮ್ಮಲದಾರ್'', ''ಸುಂದರ್ ಮೀ ಹೋಣಾರ್'', ರಾಜಾ ಒಯದೀಪೌಸ್''. ''ತೀನ್ ಪೈಶಾಚಾ ತಮಾಶಾ''. ''ಏಕ್ ಝುಂಜ ವಾರ್‍ಯಾಶಿ'' ಹಾಗೂ ಅತ್ಯಂತ ಜನಪ್ರಿಯವಾದ ''ತೀ ಫುಲರಾಣಿ''. ಈ ಮೂಲ ಕೃತಿಗಳ ಭಾಷೆ, ಸಂಸ್ಕೃತಿ, ಉದ್ದೇಶ, ಸಾಮಾಜಿಕ ಸಂದರ್ಭ ಎಲ್ಲವೂ ವಿಭಿನ್ನವಾಗಿದ್ದರೂ, ಇವೆಲ್ಲವುಗಳನ್ನೂ ಅರಿತುಕೊಂಡು, ಅರಗಿಸಿಕೊಂಡು ಈ ಮಣ್ಣಿಗೆ ಅನ್ವಯವಾಗುವಂತೆ ಬದಲಾಯಿಸಿ ಪುನರ್ರಚಿಸಿದ್ದು ಮಾತ್ರ ಪುಲ ಹಿರಿಮೆಯಲ್ಲ. ಈ ಎಲ್ಲ ವಿವಿಧ ಕೃತಿಗಳ ಪಾತ್ರಗಳ ಸುಖದುಃಖ, ಜೀವನೋತ್ಸಾಹ, ಆಸೆ ಆಕಾಂಕ್ಷೆ, ಎಲ್ಲವೂ ದೇಶಭಾಷಾತೀತವಾದವು ಎಂಬುದನ್ನು ಕೂಡಾ ಅವರು ತಮ್ಮ ಕೃತಿಗಳ ಮೂಲಕ ತೋರಿಸಿದರು.

''ಅಪೂರ್ವಾಯಿ'', ''ಜಾವೆ ತ್ಯಾಂಚಾ ದೇಶಾ'', ''ಪೂರ್ವರಂಗ; ವಂಗಚಿತ್ರೆ'' ಈ ಪುಸ್ತಕಗಳ ಮೂಲಕ ಪುಲ ಪ್ರವಾಸ ಸಾಹಿತ್ಯಕ್ಕೆ ಒಂದು ಹೊಸ ರೂಪವನ್ನು ಕೊಟ್ಟರು. ಸಾಕಷ್ಟು ದೇಶ, ವಿದೇಶ ಸುತ್ತಿದ ಪುಲ ಆ ಪ್ರವಾಸಗಳಲ್ಲಿ ಕಂಡದ್ದು, ಅನುಭವಿಸಿದ್ದು, ಹಿಡಿಸಿದ್ದು ಎಲ್ಲವನ್ನು ತಮ್ಮದೇ ಆದ ಆತ್ಮೀಯ ಭಾಷೆಯಲ್ಲಿ ಓದುಗರಿಗೆ ಹೇಳುತ್ತಾ ಹೋದರು. ಪರದೇಶಪ್ರಯಾಣ ಸಾಮಾನ್ಯರಿಗೆ ಅತ್ಯಂತ ಕಂಡದ್ದು, ಅನುಭವಿಸಿದ್ದು, ಹಿಡಿಸಿದ್ದು ಎಲ್ಲವನ್ನು ತಮ್ಮದೇ ಆದ ಆತ್ಮೀಯ ಭಾಷೆಯಲ್ಲಿ ಓದುಗರಿಗೆ ಹೇಳುತ್ತಾ

**ಪು.ಲ. ದೇಶಪಾಂಡೆಯವರ ಸನ್ಮಾನ / ಪ್ರಶಸ್ತಿಗಳು**

**ಕೇಂದ್ರ ಸರ್ಕಾರ**
೧. ಪದ್ಮಶ್ರೀ
೨. ಪದ್ಮಭೂಷಣ

**ರಾಜ್ಯ ಸರ್ಕಾರ**
೧. ಮಹಾರಾಷ್ಟ್ರ ಗೌರ ಪ್ರಶಸ್ತಿ

**ಸಿನೇಮಾ ರಂಗದಲ್ಲಿ**
೧. ಹಿಂದಿ ''ಫುಲ್ ಔರ್ ಕಲಿಯಾ'' ಚಿತ್ರಕ್ಕೆ ಸರ್ವೋತ್ಕೃಷ್ಟ ರಾಷ್ಟ್ರ ಪ್ರಶಸ್ತಿ
೨. ಹಿಂದಿ ''ಆಜ್ ಔರ್ ಕಲ್'' ಚಿತ್ರದ ಕಥೆಗಾಗಿ ಉತ್ತರ ಪ್ರದೇಶ ಪಾರಿತೋಷಕ
೩. ''ಏಕ್ ಹೋತಾ ವಿದೂಷಕ್'' ಮರಾಠಿ ಚಿತ್ರದ ಚಿತ್ರಕಥೆ, ಸಂಭಾಷಣೆಗೆ ಮೂರನೇ ಮಹಾರಾಷ್ಟ್ರ ರಾಜ್ಯ ಮರಾಠಿ ಚಿತ್ರಪಟ ಮಹೋತ್ಸವದ ಪುರಸ್ಕಾರ

**ಸಾಹಿತ್ಯ ರಂಗದಲ್ಲಿ**
೧. ಸತತ ೬ ವರ್ಷ (೧೯೫೮ರಿಂದ ೧೯೬೩) ತಮ್ಮ ಬೇರೆ ಬೇರೆ ಪುಸ್ತಕಗಳಿಗಾಗಿ ಮಹಾರಾಷ್ಟ್ರ ರಾಜ್ಯಸರ್ಕಾರದ ವಾರ್ಷಿಕ ಸಾಹಿತ್ಯ ಪ್ರಶಸ್ತಿ ವಿಜೇತ. (ಅಲ್ಲಿಂದ ಮುಂದೆ ಪುಲ ಪುಸ್ತಕಗಳನ್ನು ಈ ಪುಸ್ಕಾರಗಳಿಗಾಗಿ ಪರಿಗಣಿಸದಿರಲು ನಿರ್ಧರಿಸಲಾಯಿತು!)
೨. ''ವ್ಯಕ್ತಿ ಅಣಿ ವಲ್ಲಿ'' ಪುಸ್ತಕಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ
೩. ಸಂಗೀತ ನಾಟಕ ಅಕಾಡೆಮಿಯ ನಾಟಕಲೇಖನ ಪುರಸ್ಕಾರ.

**ಅಧ್ಯಕ್ಷತೆಗಳು.**
೧. ನಾಂದೇಡ್‌ನಲ್ಲಿರುವ ನಡೆದ ೪೭ನೇ ಮರಾಠಿ ನಾಟ್ಯ ಸಮ್ಮೇಳನ
೨. ಇಚಲಕರಂಜಿ ಮರಾಠಿ ಸಾಹಿತ್ಯ ಸಮ್ಮೇಳನ.
೩. ವಿಟಾದಲ್ಲಿ ನಡೆದ ಗ್ರಾಮೀಣ ಮರಾಠಿ ಸಾಹಿತ್ಯ ಸಮ್ಮೇಳನ
೪. ಗೌರವ ಸಂಚಾಲಕ
೫. ಮರಾಠಿ ಸಾಹಿತ್ಯ ಸಮ್ಮೇಳನ
೬. ಚಂದ್ರಪುರದಲ್ಲಿ ನಡೆದ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನ

**ವಿಶ್ವವಿದ್ಯಾನಿಲಯಗಳು**
೧. ಕಲಕತ್ತಾದ ರವೀಂದ್ರ ವಿದ್ಯಾಪೀಠದ ''ಸಾಹಿತ್ಯಾಚಾರ್ಯ '' (ಡಿ.ಲಿಟ್.) ಗೌರವ ಪದವಿ
೨. ಪುಣೆ ವಿದ್ಯಾಪೀಠದ ಡಿ.ಲಿಟ್ ಗೌರವ ಪದವಿ
೩. ಪುಣೆಯ ಟಿಳಕ್ ಮಹಾರಾಷ್ಟ್ರ ವಿದ್ಯಾಪೀಠದ ಗೌರವ ಡಿ.ಲಿಟ್. ಪದವಿ

**ಇತರ**
೧. ಪುಣೆಯಲ್ಲಿ 'ಬಾಲಗಂಧರ್ವ ಗೌರವ' ಪ್ರಶಸ್ತಿ
೨, ನಾಸಿಕಲ್ಲಿ 'ಗಡಕರಿ' ಪುಸ್ಕಾರ
೩, ಪುಣೆಯಲ್ಲಿ 'ಪುಣ್ಯಭೂಷಣ' ಪ್ರಶಸ್ತಿ
೪. ಪುಣೆಯಲ್ಲಿ 'ಗದಿಮಾ' ಪ್ರಶಸ್ತಿ

ಹೋದರು. ಪರದೇಶಪ್ರಯಾಣ ಸಾಮಾನ್ಯರಿಗೆ ಅತ್ಯಂತ ಅಪರೂಪವಾದ ಐವತ್ತರ ದಶಕದ ಸರಿಸುಮಾರಿನಲ್ಲಿ ಪುಲ ತಮ್ಮ ಪ್ರವಾಸ ಕಥನದಿಂದ ಈ ದೂರದೇಶಗಳನ್ನು ಜನಸಾಮಾನ್ಯರ ಹತ್ತಿರಕ್ಕೆ ತಂದರು. ಅಷ್ಟೇ ಅಲ್ಲ, ಆ ಬೆಳಕಿನಲ್ಲಿ ನಮ್ಮ ಜನ, ನಮ್ಮ ಸಮಾಜ, ನಮ್ಮ ದೇಶ ಇವುಗಳತ್ತ ಹೊಸ ನೋಟವನ್ನು ಜನಸಾಮಾನ್ಯರಿಗೆ ದೊರಕಿಸಿದರು.

ವ್ಯಕ್ತಿ ಚಿತ್ರ, ಈ ಸಾಹಿತ್ಯ ಪ್ರಕಾರದಲ್ಲಿ ಪುಲರಿಗೆ ಒಂದು ವಿಶಿಷ್ಟ ಸ್ಥಾನವಿದೆ. ಅವರ ಬರೆದ ೧೮ ಕಾಲ್ಪನಿಕ ವ್ಯಕ್ತಿ ಚಿತ್ರಗಳ ಸಂಕಲನ ''ವ್ಯಕ್ತಿ ಅಣಿ ವಲ್ಲಿ'' ಪುಸ್ತಕಕ್ಕೆ ೧೯೬೫ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸತ್ತಿ ದೊರೆಯಿತು. ಒಬ್ಬನಿಂದ ಅಜರಾಮರರಾದರೆ, ಪುಲ ಹೆಸರನ್ನು ಹಸುರಾಗಿಸುವ ಅವರಿಂದ ಸೃಷ್ಟಿಯಾದ ವ್ಯಕ್ತಿಚಿತ್ರಗಳು ಒಬ್ಬರಲ್ಲ, ಇಬ್ಬರಲ್ಲ, ಹತ್ತಾರು. ತಮ್ಮ ಸೂಕ್ಷ್ಮ ದೃಷ್ಟಿಯಿಂದ ಬದುಕನ್ನು ಅವಲೋಕಿಸಿ ಪುಲ ಸೃಷ್ಟಿಸಿದ ಈ ಪಾತ್ರಗಳ ವೈವಿಧ್ಯತೆ ಅಪೂರ್ವವಾದದ್ದು. ''ಬಟಾಟ್ಯಾಚಿ ಚಾಳ್'' ನ ನಿವಾಸಿಗಳಾದ ಕೋಚಕೇಕರ್ ಮಾಸ್ತರ್, ಪಂತ, ಕುಶಭಾವು ಅಸ್ತೇಕರ್ ಇತ್ಯಾದಿಗಳು, ಕೊಂಕಣದ ಹಳ್ಳಿಯೊಂದರ ಘಾಟಿ ಮುದುಕ ಅಂತೂ ಬರ್ವಾ, ಅತಿರೇಕದ ಆದರ್ಶ ವಿದ್ಯಾರ್ಥಿ ಸಖಾರಾಮ ಗಟಣೆ, ಯಾವುದೇ ಮದುವೆ ಸುಸೂತ್ರವಾಗಿ ನೆರವೇರಿಸಲು ಅನಿವಾರ್ಯಗಿರುವ ನಾರಾಯಣ, ಲೇಖಕನಿಗೆ ರೈಲು ಡಬ್ಬಿಯಲ್ಲಿ ಸಹಪ್ರಯಾಣಿನಾಗಿದ್ದ ಪೆಸ್ತೋಂಜಿ, ಹೊಲಿಗೆ ''ಕಾಲೇಜಿನ'' ಮಾಲೀಕ ''ಪ್ರೊಫೆಸರ್'' ರಿಗಳ ಈ ಹಾಗೂ ಇನ್ನೂ ಅನೇಕ ಪುಲ ''ಮಾನಸ ಪುತ್ರ'' ರು ಕಲ್ಲಿನಲ್ಲಿ ಕಡೆದ ಪ್ರತಿಮೆಗಳನ್ನು ಸ್ಪಷ್ಟವಾಗಿ, ರಕ್ತ ಮಾಂಸ ತುಂಬಿದ ಮನುಷ್ಯರೋ ಎಂಬಷ್ಟು ನೈಜವಾಗಿ, ಪುಲರಿಗೆ ಪ್ರಿಯರಾಗಿದ್ದರ ಪುಸ್ತಕಗಳ ಪಾತ್ರಗಳಂತೆ, ತಮ್ಮ ಸ್ವಭಾವ ವೈಚಿತ್ರಗಳಿಂದ ಓದುಗರನ್ನು ನಗಿಸುತ್ತಲೇ ಆಪ್ತರಾಗುತ್ತಾರೆ. ಅಂತೆಯೇ ಇವರಲ್ಲಿ ಅನೇಕರು ಸುಸಂಸ್ಕೃತ ಮರಾಠಿ ಜನಗಳ ಮನೆಮಾತಾಗಿ ನಿಂತು ಬಿಟ್ಟಿದ್ದಾರೆ.

ಪುಲ ಬರೆದ ಈ ಕೃತಿಗಳನ್ನು ಓದುವುದು ಒಂದು ಸೊಗಸಾದರೆ ಅವರೇ ಅದನ್ನು ರಂಗದ ಮೇಲೆ ಮಾತನಾಡಿ ತೋರಿಸುವುದನ್ನು ಕೇಳುವುದೇ ಮತ್ತೊಂದು ವಿಶಿಷ್ಟ ಸೊಗಸು. ರಂಗಸ್ಥಳದ ಮುಚ್ಚಿದ ಪರದೆಯ ಎದುರು ಸಾಮಾನ್ಯ ದಿರಿಸು ತೊಟ್ಟು ಕತ್ತಿಗೆಗೆ ಒಂದು ಮಫ್ಲರ್ ಸುತ್ತಿಕೊಂಡು ''ಕಥಾಕಥನ'' (ಅಥವಾ ಪುಲ ಕರೆಯಲ ಇಷ್ಟ ಪಟ್ಟಂತೆ

''ಬಹುರೂಪಿ'') ಎಂಬ ಹೆಸರಿನಲ್ಲಿ ತಮ್ಮ ಕೃತಿಗಳನ್ನು ತಾವೇ ಸಾರ್ವಜನಿಕರಿಗೆ ಓದಿ, ಅಭಿನಯಿಸಿ, ಹಾಡಿ ತೋರಿಸುವ ಮೂಲಕ ಪುಲ ಸಭಿಕರನ್ನು ನಗೆಗಡಲಿನಲ್ಲಿ ಮುಳುಗಿಸಿ ಎತ್ತಿದರು. ''ಬಟಾಟ್ಯಾಚಿ ಚಾಳ್''ನ ಪ್ರಸಿದ್ಧಿಯನ್ನು ಹಿಂದೆಯೇ ಹೇಳಿದೆ. ಅದೇ ಪ್ರಕಾರದ ಜನಪ್ರಿಯತೆಯನ್ನು ಪಡೆದ ಅವರ ಇತರ ಕಥನಗಳೆಂದರೆ ''ಅಸಾ ಮಿ ಅಸಾಮಿ'', ''ಮ್ಹೈಸ್'' ಎಂಬ ಹಾಸ್ಯಪೂರ್ಣ ಕಥೆ, ನಾರಾಯಣ, ಅಂತೂ ಬರ್ವಾ, ಸಖಾರಾಮ ಗಟಣೆ ಮೊದಲಾದ ವ್ಯಕ್ತಿಚಿತ್ರಗಳು ಇತ್ಯಾದಿ ಇತ್ಯಾದಿ. ಪುಲರಿಗೆ ಚಿಕ್ಕಂದಿನಿಂದಲೂ ಕೈಗೂಡಿದ್ದ ಅನುಕರಣಾ ಕಲೆಯ ಪೂರ್ಣ ಅನುಭವ ಅವರ ಈ ಕಥಾ ಕಥನಗಳನ್ನು ಕೇಳಿದಾಗ ಅರಿವಿಗೆ ಬರುತ್ತದೆ. ಒಬ್ಬನೇ ವ್ಯಕ್ತಿ ಇಷ್ಟೆಲ್ಲ, ವಿಭಿನ್ನ ರೀತಿಯ ವ್ಯಕ್ತಿಗಳ ನಕಲನ್ನು ಅನಾಯಾಸವಾಗಿ ಕೋಪ, ದುಃಖ, ಆನಂದ, ಆತಂಕ ಮೊದಲಾದ ಭಾವಗಳ ಸಹಿತವಾಗಿ ಎಷ್ಟು ಚೆನ್ನಾಗಿ ಮಾಡಬಲ್ಲ ಎಂಬುದನ್ನು ಕೇಳಿಯೇ ಬೆರಗಾಗಬೇಕು. ಪುಲರ ಈ ಗಳು ಇವತ್ತಿಗೂ ಬಹಳ ಬೇಡಿಕೆಯಲ್ಲಿವೆ. ನನಗೆ ತಿಳಿದ ಮಟ್ಟಿಗೆ ಕನ್ನಡದಲ್ಲಿ ಈ ರೀತಿಯ 'ಕಥಾಕಥ'ನದ ಪ್ರಕಾರ ಇಷ್ಟು ದೊಡ್ಡ ರೀತಿಯಲ್ಲಿ ಇಷ್ಟು ಜನಪ್ರಿಯವಾಗಿ ಇನ್ನೂ ಬರಬೇಕಾಗಿದೆ.

ಪುಲ ರ ಪ್ರತಿಭಾ ವೈವಿಧ್ಯ ಇಷ್ಟಕ್ಕೇ ಮುಗಿಯಲಿಲ್ಲ ! ಸಂಗೀತ ಪ್ರೇಮ ಅವರ ರಕ್ತದಲ್ಲಿ ಬೆರೆತು ಹೋಗಿತ್ತು. ಅವರೇ ಹೇಳಿಕೊಂಡಂತೆ ''ಸಾಹಿತ್ಯ, ಸಂಗೀತ, ನಾಟಕ, ಸಿನೆಮಾ, ಅಭಿನಯ ಇವುಗಳಲ್ಲಿ ಒಂದನ್ನು ಆರಿಸಿಕೊಳ್ಳುವುದು ಎಂದರೆ ದ್ರೌಪದಿಗೆ ಪಂಚಪಾಂಡವರಲ್ಲಿ ಯಾರು ಅತಿ ಪ್ರಿಯರಾಗಿದ್ದರು ಎಂದು ಕೇಳಿದಂತೆ''. ಅದರೂ ಎಂಬ ಉದ್ಗಾರ ಕೂಡ ಅವರ ಭಾಷಣದಲ್ಲಿ, ಸಂವಾದಗಳಲ್ಲಿ ಬಂದದ್ದುಂಟು. ಚಿಕ್ಕಂದಿನಲ್ಲಿ ಹಾರ್ಮೋನಿಯಂ ಬಾರಿಸಿ ಬಾಲಗಂಧರ್ವರಿಂದ ಶಹಭಾಸ್ ಪಡೆದದ್ದನ್ನು ಹಿಂದೆಯೇ ಹೇಳಿದೆ. ತಬಲಾ ಬಾರಿಸುವುದರಲ್ಲೂ ಅವರಿಗೆ ಪರಿಶ್ರಮವಿತ್ತು. ಮುಂದೆ ಬೇರೆ ಬೇರೆ ಸಂದರ್ಭಗಳಲ್ಲಿ ಅವರು ಕೊಳಲು, ಢೋಲಕ್, ಪಿಯನೋ ಸಹ ಬಾರಿಸಿದ ನಿದರ್ಶನಗಳಿವೆ. ತಾರುಣ್ಯದಲ್ಲಿ ಸುಗಮ ಸಂಗೀತದಲ್ಲಿ ಅವರು ಕೊಟ್ಟ ಸಾರ್ವಜನಿಕ ಕಾರ್ಯಕ್ರಮಗಳು ಬಹಳ ಜನಪ್ರಿಯವಾಗಿದ್ದವು. ಮುಂದೆ ಸಿನೆಮಾ, ನಾಟಕಗಳಲ್ಲಿ ಅವರು ಸ್ವತಃ ಗೀತೆಗಳನ್ನು ಬರೆದದ್ದು, ಹಾಡಿದ್ದಷ್ಟೇ ಅಲ್ಲ, ಜಿತೇಂದ್ರ ಅಭಿಷೇಕಿ, ಮಾಣಿಕ್ ವರ್ಮಾ, ಆಶಾ ಭೋಂಸಲೆ ಇತ್ಯಾದಿ ಖ್ಯಾತನಾಮರಿಗೆ ಸಂಗೀತ ನಿರ್ದೇಶನ ಮಾಡಿದ್ದುಂಟು. ಹಿಂದುಸ್ತಾನಿ ಸಂಗೀತದ ಅತಿರಥ ಮಹಾರಥರೊಂದಿಗೆ ಅವರ ಆತ್ಮೀಯ ಸಂಪರ್ಕವಿತ್ತು. ಬಾಲಗಂಧರ್ವರು ಆರಾಧ್ಯ ದೈವವಾದರೆ, ಕುಮಾರಗಂಧರ್ವರು ಜೀವದ ಗೆಳೆಯರಾಗಿದ್ದರು. ಭೀಮಸೇನ ಜೋಷಿ, ವಸಂತರಾವ್ ದೇಶಪಾಂಡೆ ಇತ್ಯಾದಿ ದಿಗ್ಗಜಗಳಂತೂ ಮನೆಯವರೇ ಆಗಿದ್ದರು. ಇವರೆಲ್ಲನೇಕರ 'ಮೆಹಫಿಲ್'ಗಳಲ್ಲಿ ಪುಲ ಹಾರ್ಮೋನಿಯಂ 'ಸಾಥಿ' ಕೂಡಾ ಕೊಟ್ಟದ್ದುಂಟು.

ಈ ರೀತಿ ವಿವಿಧ ಪ್ರದರ್ಶಕ ಕಲೆಗಳಲ್ಲಿ ನೈಪುಣ್ಯತೆ ಗಳಿಸಿದ್ದ ಪುಲ ಸಹಜವಾಗಿಯೇ ಸಿನೆಮಾ ಕ್ಷೇತ್ರಕ್ಕೂ ಕಾಲಿಟ್ಟರು. ನಲವತ್ತರ ದಶಕದಲ್ಲಿ ನಟನಾಗಿ, ಹಿನ್ನೆಲೆ ಗಾಯಕನಾಗಿ ಸಿನೆಮಾ ರಂಗಕ್ಕೆ ಪ್ರವೇಶ ಮಾಡಿದ ಪುಲ ೧೯೫೭ರ ವರೆಗೂ ಸುಮಾರು ೨೮ ಮರಾಠಿ ಮತ್ತು ಹಿಂದಿ ಚಿತ್ರಗಳ ವಿವಿಧ ವಿಭಾಗಗಳಲ್ಲಿ ಕೈಯಾಡಿಸಿ ಹೆಸರು ಮಾಡಿದರು. ನಟನೆ, ಹಿನ್ನೆಲೆ ಗಾಯನ, ಮೂಲ ಕಥೆ, ಚಿತ್ರ ಕಥೆ, ಸಂವಾದ, ಸಂಗೀತ ನಿರ್ದೇಶನ, ಚಿತ್ರಗೀತೆ ರಚನೆ, ನಿರ್ದೇಶನ, ಹೀಗೆ ಅವರ ಪ್ರತಿಭಾ ವ್ಯಾಪ್ತಿ ಅನೇಕ ದಿಕ್ಕುಗಳಿಗೆ ಚಾಚಿತ್ತು. ೧೯೫೩ರಲ್ಲಿ ಬಿಡುಗಡೆಯಾದ 'ಗುಳಾಚಾ ಗಣಪತಿ' ಚಿತ್ರದಲ್ಲಿಯಂತೂ ಪ್ರಧಾನ ಪಾತ್ರ, ಮೂಲ ಕಥೆ, ಚಿತ್ರ ಕಥೆ, ಸಂವಾದ, ಸಂಗೀತ ಹಾಗೂ ನಿರ್ದೇಶನ ಇಷ್ಟನ್ನೂ ಒಬ್ಬರೇ ನಿಭಾಯಿಸಿದ ಕಾರಣ ಈ ಚಿತ್ರ ''ಸಬ್ ಕುಛ್ ಪುಲ'' ಎಂದೇ ಹೆಸರುವಾಸಿಯಾಯಿತು. ''ವಂದೇ ಮಾತರಂ'', ''ಪುಢಚ ಪಾವೂಲ್'', ''ದೇವಬಾಪ್ಪಾ'', ಇತ್ಯಾದಿ ಚಿತ್ರಗಳು ಇಂದೂ ಮರಾಠಿ ಜನಗಳ ನೆನಪಿನಲ್ಲಿ ಉಳಿದಿವೆ.

ಅನೇಕ ಪ್ರಶಸ್ತಿ ಸನ್ಮಾನಗಳು ಸಹಜವಾಗಿಯೇ ಪುಲರನ್ನು ಅರಸಿಕೊಂಡು ಬಂದವು. ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಗ್ಗೆ ಮೊದಲೇ ಪ್ರಸ್ತಾವಿಸಲಾಗಿದೆ. ಮುಂದೆ ಕೇಂದ್ರ ಸರ್ಕಾರದಿಂದ 'ಪದ್ಮಶ್ರೀ'. 'ಪದ್ಮಭೂಷಣ', ಮಹಾರಾಷ್ಟ್ರ ಸರ್ಕಾರದ 'ಮಹಾರಾಷ್ಟ್ರ ಗೌರವ್', ವಿವಿಧ ವಿಶ್ವವಿದ್ಯಾನಿಲಯಗಳ ಗೌರವ ಡಾಕ್ಟರೇಟ್, ಅನೇಕ ಖಾಸಗಿ ಸಂಸ್ಥೆಗಳಿಂದ ಸನ್ಮಾನ, ಅನೇಕ ಸಮ್ಮೇಳನಗಳ ಅಧ್ಯಕ್ಷ ಪದ ಇತ್ಯಾದಿ. (ಪುಲರಿಗೆ ದೊರಕಿದ ಸನ್ಮಾನಗಳಿಗೆ ಈ ಲೇಖನದೊಂದಿಗೆ ಪ್ರಕಟವಾಗಿರುವ ಪಟ್ಟಿಯನ್ನು ನೋಡಿ)

ಒಬ್ಬ ಒಳ್ಳೆಯ ಲೇಖಕ ಒಳ್ಳೆಯ ಮನುಷ್ಯನೂ ಆಗಿರಬೇಕೆಂದಿಲ್ಲ. ಪುಲ ಈ ವಿಷಯದಲ್ಲಿ ಅಪವಾದವಾಗಿದ್ದರು. ಅವರ ಹಾಸ್ಯ ಯಾವತ್ತೂ ಸದಭಿರುಚಿಯನ್ನು, ಔಚಿತ್ಯವನ್ನು ಮೀರಲಿಲ್ಲ. ಮರಾಠಿಗಳ ರೀತಿ ನೀತಿ, ಆಚಾರ, ವಿಚಾರಗಳು ಅವರ ವಿಡಂಬನೆಗೆ ತುತ್ತಾದರೂ ಅದು ಅಪಹಾಸ್ಯದ ಮಟ್ಟಕ್ಕೆ ಇಳಿಯಲಿಲ್ಲ. ಇತರರನ್ನು ವಿಡಂಬಿಸುವ ಜೊತೆಜೊತೆಯಲ್ಲೇ ತನ್ನ ಬಗ್ಗೆಯೂ ಲೇವಡಿ ಮಾಡಿಕೊಳ್ಳುವ ದೊಡ್ಡತನವನ್ನು ಅವರು ತೋರಿದರು. ಅವರ ನಾರಾಯಣ, ಸಖಾರಾಮ ಗಟಣೆ, ಪೆಸ್ತೊಂಜಿ, ಅಂತೂ ಬರ್ವಾ ಇತ್ಯಾದಿಗಳ ವ್ಯಕ್ತಿಚಿತ್ರಗಳಲ್ಲಿಯೂ ಹಾಸ್ಯದ ಮಧ್ಯೆ ಅಲ್ಲಲ್ಲಿ ಮಾನವೀಯ ಅನುಕಂಪ, ಕನಿಕರ, ಖೇದ ಭಾವಗಳು ಕೂಡಾ ಪ್ರಕಟವಾಗುತ್ತವೆ. ಓದಿ, ಕೇಳಿ ಆನಂದಿಸುತ್ತಿರುವ ರಸಿಕರ ಹೃದಯವನ್ನು ಸಟಕ್ಕನೆ ಮುಟ್ಟುತ್ತವೆ. ಅಂತೆಯೇ ಮದುವೆ ಮನೆಯಲ್ಲಿ ಪ್ರತಿಯೊಂದು ಕಲಾಪವೂ ಸುಸೂತ್ರ ನಡೆಯಲು ಎಲ್ಲರಿಗೂ ಬೇಕಾಗಿರುವ ನಾರಾಯಣ, ಮದುವೆ ಮುಗಿದು ಛತ್ರ ಖಾಲಿಯಾಗುತ್ತಿದ್ದಂತೆ ಸುಸ್ತಾಗಿ ಮೂಲೆಯಲ್ಲಿ ಬೆಂಚಿನಮೇಲೆ ಮುದುರು ಮಲಗಿದರೆ, ಅವನನ್ನು ಯಾರೂ ವಿಚಾರಿಸುವುದಿಲ್ಲ. ಅವನ ಹೆಂಡತಿ ಮಾತ್ರ ಅವನ ಮೈಮೇಲೆ ತೇಪೆ ಹಾಕಿದ ದುಪ್ಪಟಿ ಸದ್ದಿಲ್ಲದೆ ಹೊಚ್ಚಿ ಒಳಹೋಗುತ್ತಾಳೆ. ಈ ವಾಕ್ಯಗಳನ್ನು ಓದುವವರ ಕಣ್ಣು ತೇವವಾಗದೆ ಇರುವುದಿಲ್ಲ. ಮಿರಜದಿಂದ ಬೆಂಗಳೂರಿಗೆ ಹೋಗುವ ರೈಲಿನಲ್ಲಿ ಲೇಖಕನ ಸಹಪ್ರಯಾಣಿಕ ೭೮ ವರ್ಷದ ಪೆಸ್ತೊಂಜಿ ತನ್ನ ಪಾರ್ಸಿ ಬಾವಾಜಿ ಭಾಷೆಯಲ್ಲಿ ಲೇಖಕನೊಂದಿಗೆ ಹರಟೆ ಹೊಡೆಯುತ್ತಿದ್ದವನು, ಲೇಖಕ ಪ್ರಸಿದ್ಧ ವ್ಯಕ್ತಿ ಎಂದು ತಿಳಿದಕೂಡಲೇ ಲೇಖಕನ ಹೆಸರು ಪತ್ರಿಕೆಗಳಲ್ಲಿ ಓದಿರುವುದಾಗಿ ಹೇಳಿ ಸಂತೋಷಪಡುತ್ತಾನೆ. ಅಂದರೊಂದಿಗೇ, ಲೇಖಕನ ಮಾತಿಗೆ ಜವಾಬು ಕೊಡುತ್ತಾ ಹೇಳುತ್ತಾನೆ. ''ನನ್ನ ಹೆಸರು ಪೇಪರಿನಲ್ಲಿ ಬರುವುದು ಪೆಸ್ತೊಂಜಿ ನಿದ್ರೆಯಲ್ಲಿ ಸತ್ತ ಎಂಬ ಸುದ್ದಿ ನನ್ನ ಮಗ ಪತ್ರಿಕೆಯಲ್ಲಿ ಪ್ರಕಟಿಸಿದಾಗ ಮಾತ್ರ''- ಓದುತ್ತಿರುವವರ ಹೃದಯ ಆ ವೃದ್ಧ ಪಾರ್ಸಿ ಮನುಷ್ಯನಿಗಾಗಿ ಒಂದು ಕ್ಷಣವಾದರೂ ತುಡಿಯದೇ ಇರುವುದಿಲ್ಲ.

ಇತರ ಭಾಷೆಗಳ ಲೇಖಕರ, ಸಾಹಿತ್ಯದ ಬಗ್ಗೆ ಅವರಿಗೆ ಆದರ ಭಾವವಿತ್ತು. ೧೯೬೫ರಲ್ಲಿ ಅವರಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದ ಸಂದರ್ಭದಲ್ಲಿ ದೆಹಲಿಯಲ್ಲಿ ಮಾಡಿದ ಭಾಷಣದಲ್ಲಿ ಅವರು ಹೀಗೆ

ಹೇಳುತ್ತಾರೆ. ಕನ್ನಡ ಸಾಹಿತ್ಯದ ದಿಗ್ಗಜಗಳಾದ ಮಾಸ್ತಿ, ಕಾರಂತರು, ಕುವೆಂಪು, ಭೈರಪ್ಪ ಮೊದಲಾದವರ ಬಗ್ಗೆ ಅವರಿಗೆ ವೈಯಕ್ತಿಕವಾಗಿ ಅಥವಾ ಅವರ ಕೃತಿಗಳ ಮೂಲಕ ಪರಿಚಯವಿತ್ತು. ರವೀಂದ್ರನಾಥರ ಠಾಕೂರರ ಅಭಿಮಾನಿಯಾಗಿದ್ದ ಅವರು ಶಾಂತಿನಿಕೇತನದಲ್ಲಿ ಕೆಲವು ಕಾಲ ನೆಲೆಸಿದ್ದೂ ಉಂಟು. ಅವರ ಆ ಕಾಲದ ಅನುಭವಗಳು ಅವರ 'ವ್ಯಂಗ್ಯಚಿತ್ರ' ಕೃತಿಯಲ್ಲಿ ಕಾಣಬಹುದು. ಮರಾಠಿಯಂತೂ ಸರಿ. ಸಂಸ್ಕೃತ, ಹಿಂದಿ, ಇಂಗ್ಲೀಷ್ ಹಾಗೂ ಉರ್ದು ಭಾಷೆಗಳಲ್ಲೂ ಅವರಿಗೆ ಪ್ರಭುತ್ವವಿತ್ತು. ಇಷ್ಟಲ್ಲದೆ ಬೆಂಗಾಲಿ ಭಾಷೆಯನ್ನು ಕೂಡಾ ಅಭ್ಯಾಸ ಮಾಡಿದ್ದರು.

ಪು.ಲ ತಮ್ಮ ಲೇಖನಗಳಿಂದ, ಏಕಪಾತ್ರಾಭಿನಯದ ಕಾರ್ಯಕ್ರಮಗಳಿಂದ, ಬರೀ ಅಭಿಮಾನಿಗಳನ್ನಷ್ಟೇ ಅಲ್ಲದೆ ಚೆನ್ನಾಗಿ ಹಣಸಂಪಾದನೆಯನ್ನೂ ಮಾಡಿದರು. ಗಳಿಸಿದ ಹಣವನ್ನು ಆಡಂಬರದಿಂದ, ಹೆಚ್ಚು ಸೌಕರ್ಯದಿಂದ ಬದುಕುವುದಕ್ಕೆ, ಆಪತ್ಕಾಲಕ್ಕಾಗಿ ಕೂಡಿಡುವುದಕ್ಕೆ ವಿನಿಯೋಗಿಸುವುದು ಸಾಧಾರಣ ಮನುಷ್ಯರ ಸ್ವಭಾವ. ಆದರೆ ಪು.ಲ ತಾವು ಅಸಾಧಾರಣರು ಎಂಬುದನ್ನು ಈ ವಿಷಯದಲ್ಲಿಯೂ ತೋರಿಸಿದರು. ಈ ಬಗ್ಗೆ ಮೊದಲೇ ಪತ್ನಿ ಸುನೀತಾಬಾಯಿ ಯವರೊಂದಿಗೆ ನಿರ್ಧರಿಸಿದಂತೆ ''ಪು.ಲ. ಫೌಂಡೇಷನ್'' ಸ್ಥಾಪಿಸಿ ತಾವು ಗಳಿಸಿದ ಹಣವನ್ನೆಲ್ಲಾ, ಸರಳ ಜೀವನಕ್ಕೆ ಸಾಕಾಗುವಷ್ಟು ಮಾತ್ರ ಇಟ್ಟುಕೊಂಡು, ಬಾಕಿ ಎಲ್ಲವನ್ನೂ ಈ ಫೌಂಡೇಷನ್ನಿಗೆ ವರ್ಗಾಯಿಸುತ್ತಿದ್ದರು. ಈ ರೀತಿ ಸಂಗ್ರಹವಾದ ಹಣವನ್ನು ಅನಾಥ ವಿದ್ಯಾರ್ಥಿ ಗೃಹ, ಬಾಬಾ ಆಮಟೆಯವರು ಕುಷ್ಠ ರೋಗಿಗಳ ಶುಶ್ರೂಷೆಗಾಗಿ ಸ್ಥಾಪಿಸಿದ ಆನಂದವನ, ಮನಸ್ವಿನೀ ಸಂಸ್ಥೆ, ಅಂಧರ ಶಾಲೆ, ಆಸ್ಪತ್ರೆಗಳು, ರಕ್ತ ಸಂಗ್ರಹಾಲಯಗಳು, ಗ್ರಂಥಾಲಯಗಳು ಇತ್ಯಾದಿ ಅನೇಕ ಸಂಸ್ಥೆಗಳಿಗೆ ವಿನಿಯೋಗ ಮಾಡುತ್ತಿದ್ದರು. ಈ ಕಾರ್ಯದ ಹಿರಿಮೆ ಎಂದರೆ ಒಂದಷ್ಟೂ ಪ್ರಚಾರವಿಲ್ಲದೆ, ಒಂದು ಕೈಯಿಂದ ಕೊಟ್ಟದ್ದು ಇನ್ನೊಂದಕ್ಕೆ ಗೊತ್ತಾಗದ ಹಾಗೆ, ಸದ್ದುಗದ್ದಲವಿಲ್ಲದೆ ನಡೆಯುತ್ತಿದ್ದದ್ದು. ಈ ಒಟ್ಟು ಮೊತ್ತ ಎಷ್ಟು ಎಂದು ಪು.ಲ ಆಗಲೀ, ಅವರ ಪತ್ನಿಯಾಗಲೀ ಯಾರಲ್ಲೂ ಹೇಳಿಕೊಳ್ಳದಿದ್ದರೂ, ಒಂದು ಅಂದಾಜಿನ ಪ್ರಕಾರ ಒಂದು ಕೋಟಿ ರೂಪಾಯಿಗೂ ಮೀರಿದೆ.

ಇಂಥಾ ವಿಶಾಲ ಹೃದಯದ, ದೈತ್ಯ ಪ್ರತಿಭೆಯ ಪು.ಲ ಹೋದಲ್ಲೆಲ್ಲಾ ಹೊಳೆಯುತ್ತಾ ಹೋದರು. ಮರಾಠಿ ಜನಗಳನ್ನು ಅನೇಕ ರೀತಿಯಲ್ಲಿ ಪುಲಕಿತರಾಗಿಸಿದರು. ಅವರೆಲ್ಲರ ಅಚ್ಚುಮೆಚ್ಚಾದರು.

ಇದೇ ಜೂನ್ ಆರಂಭದ ಪುಪ್ಫುಸದ ನ್ಯೂಮೋನಿಯಾದಿಂದಾಗಿ ಪುಣೆಯಲ್ಲಿ ಆಸ್ಪತ್ರೆ ಸೇರಿದ ಪು.ಲ ಪುನಃ ಚೇತರಿಕೊಳ್ಳಲಿಲ್ಲ. ನಾಲ್ಕು ದಿನ ಮೃತ್ಯುವಿನೊಂದಿಗೆ ಹೋರಾಡಿ, ಕೊನೆಗೆ ೧೨ನೇ ತಾರೀಖು ಮಂಗಳವಾರ ಮಧ್ಯಾಹ್ನ ಒಂದು ಘಂಟೆ ೨೨ ನಿಮಿಷಕ್ಕೆ ೮೧ನೆಯ ವಯಸ್ಸಿನಲ್ಲಿ ಈ ಲೋಕವನ್ನು ತ್ಯಜಿಸಿದರು. ಮಹಾರಾಷ್ಟ್ರದ ಈ ಮುದ್ದಿನ ಮಗ ಸಮಸ್ತ ಮರಾಠಿಗಳನ್ನು ಪರಿತಪಿಸುವಂತೆ ಮಾಡಿ ತಿರುಗಿ ಬರಲಾರದ ಊರಿಗೆ ಹೋಗಿಬಿಟ್ಟರು.

ಒಬ್ಬ ಕಾರಂತ, ಒಬ್ಬ ಕುವೆಂಪು, ಒಬ್ಬ ಮಾಸ್ತಿ, ಒಬ್ಬ ಬೇಂದ್ರೆ ಹಾಗೆಯೇ ಒಬ್ಬ ಪು.ಲ ಇಂಥವರು ಹುಟ್ಟುವುದು ಶತಮಾನಕ್ಕೊಮ್ಮೆ. ಹುಟ್ಟಿದ ನಾಡಿನ ಭಾಗ್ಯವಾಗಿ ಬದುಕಿದ್ದಾಗ ಹುಟ್ಟಿದ ನಾಡಿನ ಹೆಮ್ಮೆಯಾಗಿ, ಆಯ್ದುಕೊಂಡ ಕ್ಷೇತ್ರವನ್ನು ಶ್ರೀಮಂತಗೊಳಿಸುವ ಈ ಮಹಾನುಭಾವರು, ಈ ಲೋಕವನ್ನು ತ್ಯಜಿಸಿದ ಮೇಲೂ ತಮ್ಮ ಸಾಧನೆಗಳಿಂದ ಚಿರಾಯುವಾಗುತ್ತಾರೆ. ಒಬ್ಬ ಮನುಷ್ಯ ಒಂದೇ ಜೀವಮಾನದಲ್ಲಿ ಏನೆಲ್ಲ ಸಾಧಿಸಬಹುದು ಎಂದು ಉದಾಹರಣೆಗಳಾಗುತ್ತಾರೆ. ●

## ಕನ್ನಡ

*ನಮ್ಮ ಕನ್ನಡ ಭಾಷೆಯಲ್ಲಿ ಎಷ್ಟೊಂದು ವೈವಿಧ್ಯ!*
*ಕುಂದಾಪುರದಲ್ಲಿ ನೋಡಿ*
*ಅಪ್ಪ ಹೋತ, ನೀನು ಆಡುಮರಿ*
*ಇದೂ ಅಪ್ಪ ಕನ್ನಡಾರೀ !*
*ಮುಂಬೈ ಕರ್ನಾಟಕ ಹುಬ್ಬಳ್ಳಿಗೆ ಬನ್ನಿ*
*''ಅವ ಇಳಿಯಾಕ ಹತ್ಯಾನ್ರೀ''*
*ಇದೂ ಕನ್ನಡ ಅಲ್ವೇನ್ರೀ....*
*ಹೈದರಾಬಾದ್ ಕರ್ನಾಟಕ ರಾಯಚೂರಿಗೆ ಹೋಗಿ*
*ಅವಳು ಅಲ್ಲಿ ಆಳೆ, ಅವ ಅಲ್ಲಿ ಅದಾನೆ*
*ಇದೂ ಕನ್ನಡ ತಾನೆ?*
*ಈಗ ನಮ್ಮ ರಾಜಧಾನಿ*
*ಬೆಂಗಳೂರಿಗೆ ಬನ್ನಿ*
*ಎಲ್ಲೆಲ್ಲೂ... ಏಮಂಡಿ ಬಾಗುನ್ನಾರ... ಎನ್ನಡ*
*ಇದು ಮಾತ್ರ ಅಲ್ಲ*
*ನಮ್ಮ ಕನ್ನಡ !!*

*— ಬೋಳ ವಿಶ್ವನಾಥ್ ಕಾಮತ್, ಮುಂಬಯಿ*

ಶಿವರಾಮಕಾರಂತರ ಪ್ರವಾಸ ಕಥನಗಳು

*(ಪುಟ 7ರಿಂದ)*

ನಡೆಸಿದೆ. ಎಲ್ಲಕ್ಕಿಂತ ಪ್ರಿಯವಾದುದು ಪ್ರೇಕ್ಷಕರ ತನ್ಮಯತೆ.

ಪಾಶ್ಚಾತ್ಯ ಬ್ಯಾಲೆಯ ಲಕ್ಷಣ ಹೊಂದಿರುವ 'ಅಮೀರಾನ್ ಶಿಲ್ಪಿಕಶೈಲಿ'ಯ, ಜಾನಪದ ಪ್ರೇರಿತ ಮೂಕ ನಾಟಕಗಳು ಇಲ್ಲಿನ ವಿಶೇಷ. ಯಕ್ಷಗಾನ ಪಾತ್ರಗಳ ಕಾಲ್ಪನಿಕತೆ, ನಿತ್ಯ ಜೀವನದ ವಸ್ತುವಿನಲ್ಲಿ ವಾಸ್ತವಿಕತೆ 'ತೊಟ್ಟಿಲಹಾಡು' -- ನಂತಹ ಮೂಕ ನಾಟಕಗಳಲ್ಲಿ ಎದ್ದು ಕಾಣುತ್ತದೆ.

ಹೀಗೆ ಜನ ಜೀವನದ ವೈವಿಧ್ಯತೆಯ ಹಲವಾರು ಮುಖಗಳ ಪರಿಚಯವನ್ನು, ಮಾಡಿ ಕೊಡುವುದರ ಜೊತೆಗೆ, ಒಂದೊಂದೇ ತುಣುಕನ್ನು ಓದುಗರ ಮುಂದೆ ಇರಿಸುವ 'ಕಥನ ಕಲೆ' ಲೇಖಕರದು. ಕಾರಂತರ ಈ 3 ಕೃತಿಗಳು ಓದುಗರ ಜ್ಞಾನವನ್ನು ನೂರ್ಮಡಿಸುವ ಸಾಧನಗಳಾಗಿವೆ. ನುರಿತ ಲೇಖನಿಯ ಈ ಬರಹಗಳು ಕಾರಂತರನ್ನು ಕವಿಯಾಗಿ, ಒಮ್ಮೆ ವಿಜ್ಞಾನಿಯಾಗಿ, ಸಂಶೋಧಕನಾಗಿ, ಎಲ್ಲಕ್ಕಿಂತ ಹೆಚ್ಚಾಗಿ ಸಹೃದಯವಾಗಿ ಪರಿಚಯಮಾಡಿಕೊಟ್ಟಿವೆ.

'ಅಬುವಿಂದ ಬರಾಮ'ದ ವರೆಗಿನ ಪ್ರಕೃತಿ ಕವಿ ಮನದ ಕಾರಂತರ ಮನಸೆಳೆದರೆ, ಶ್ರೀಪತಿಯಂತಹ ಗೆಳೆಯರ ಸಹವಾಸ ಅಲ್ಲಲ್ಲಿ ಹಾಸ್ಯದ ಅಲೆಗಳನ್ನೆಬ್ಬಿಸಿವೆ.

ಪಶ್ಚಿಮದ ನಿಸರ್ಗ ಸುಂದರ ಪ್ರದೇಶಗಳ ನಾಡಿನ ಜನರ ಸಾಹಸ, ಸಾಧನೆ, ಕಾರಂತರಿಗೆ ಕರ್ತೃತ್ವ ಶಕ್ತಿ ಅಚ್ಚರಿ ತಂದರೆ, ಪ್ರತಿಯೊಂದು ದೇಶದ ಸಂಪತ್ತಾದ ಸಂಗ್ರಹಾಲಯಗಳು, ಕಲಾ ಸಾಧನೆಗಳು, ಸರ್ಕಾರದ ಹಾಗೂ ಜನರ ಪ್ರೋತ್ಸಾಹ, ಕರ್ತವ್ಯ ಪ್ರಜ್ಞೆ ಇವೆಲ್ಲವನ್ನು ಕಣ್ಣಾರೆ ಕಂಡ ಕಾರಂತರಿಗೆ -- ಆಲಿಸಿ ಪ್ರವೃತ್ತಿಯ ನಮ್ಮವರ ನೆನಪು ಬಂದು ನಿರಾಸೆಯಾಗಿದೆ. ಯಕ್ಷಗಾನ ದಂತಹ ಕಲೆಯನ್ನು ವ್ಯಾಪಾರೀ ವೃತ್ತಿಯನ್ನಾಗಿಸಿದ ನಮ್ಮವರು, ಸಂಸ್ಕೃತಿಯ ಮೌಲ್ಯವರಿಯದ ಸಹ ಪ್ರವಾಸಿಗನಾಗಿದ್ದ ಮಿನಿಸ್ವಾಮಿಯ ಅಸಭ್ಯವರ್ತನೆ ಲೇಖಕರ ಸಿಟ್ಟಿಗೆ ಬಲಿಯಾಗಿರುವುದು ಕಂಡು ಬರುತ್ತದೆ.

ಒಟ್ಟಿನಲ್ಲಿ ಪ್ರತ್ಯಕ್ಷದರ್ಶಿ ಲೇಖಕರ ಅಂತರಿಕ ಶೋಧನೆಯಲ್ಲಿ ಭಾವನೆಯನ್ನು ಮೂಡಿಸಿದ ಕಾರಂತರ ಈ ಪ್ರವಾಸ ಕಥನಗಳು ಕಳಕಳಿ. ಈ ಸಾಹಿತ್ಯ ಪ್ರಕಾರಕ್ಕೆ ಸಂದ ಶ್ರೀಮಂತ ಕೊಡುಗೆಯಾಗಿದೆ. ●

# ಮಧುರಾ ಕಟ್ಟಿ

ಇವರು ತಮ್ಮ 'ಗುರಿ' ಮುಟ್ಟುವ ಉದ್ದೇಶವಿರಿಸಿ ಸದ್ದು ಗದ್ದಲವಿಲ್ಲದೆ, ಒಂದಾದ ಮೇಲೊಂದರಂತೆ ಸೋಪಾನವನ್ನು ಹತ್ತುತ್ತಾ ಮೇಲೆ - ಮೇಲೆ ಏರಿ ಹೋಗುತ್ತಿದ್ದಾರೆ. ವರ್ಷಗಳ ಕಠಿಣ ಪರಿಶ್ರಮ, ಅಧ್ಯಯನ ಹಾಗೂ ಸ್ವಸಾಮರ್ಥ್ಯದಿಂದ ಸಾಧನೆಯ ಹಾದಿಯನ್ನು ಸಾಕಷ್ಟು ಕ್ರಮಿಸಿದ್ದಾರೆ. ಮೇಲಿನ ಕೆಲವು ಮಾತುಗಳಿಂದ ನಾನು ಪರಿಚಯಿಸುತ್ತಿರುವ ಸಾಧನೆಯ ನಾಯಕಿ, 'ವಾಶಿ'ಯಲ್ಲಿ ವಾಸವಾಗಿರುವ, ನಮ್ಮ ನವಿಮುಂಬಯಿ ಕನ್ನಡ ಸಂಘದ ಸದಸ್ಯ ಬಳಗಕ್ಕೆ ಸೇರಿದ, ಶ್ರೀಮತಿ ಪದ್ಮಾ ಮತ್ತು ಶ್ರೀ ಕಟ್ಟಿಯವರ ಸೊಸೆ, ಶ್ರೀಮತಿ ಮಧುರಾ ಆನಂದ ಕಟ್ಟಿ, ಬೆಂಗಳೂರಿನ ನ್ಯಾಶನಲ್ ಇನ್ಸ್ಟಿಟ್ಯೂಟ್‌ನಲ್ಲಿ ಮೂರು ವರ್ಷಗಳ ಕಾಲ ಓದಿ, ಹೋಟೇಲ್ ಮ್ಯಾನ್‌ಜ್‌ಮೆಂಟ್‌ನಲ್ಲಿ ಪದವಿ ಪಡೆದರು. (Hotel Management, Catering and applied Nutrition) ಆನಂದ್‌ರವರ ಮುದ್ದಿನ ಮಡದಿಯಾಗಿ ಮುಂಬೈಗೆ ಬಂದನಂತರ, ಪತಿಯು ಪ್ರೋತ್ಸಾಹದ ಪನ್ನೀರೆರಚಿ ಮಧುರಾ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಳ್ಳಲು ಅನುವು ಮಾಡಿಕೊಟ್ಟರು. ಅವರು ಆ ನಂತರ, ಹಿಂತಿರುಗಿ ನೋಡಲೇ ಇಲ್ಲ, 'ನ್ಯೂಉಮನ್'' ''ಪ್ಯಾಸೇಜ್'' ''ಸೊಸೈಟ'' 'ಮೇರಿ ಸಹೇಲಿ', 'ಕರ್ನಾಟಕ ಮಲ್ಲ' 'ಟೈಮ್ಸ್ ಆಫ್ ಇಂಡಿಯಾ' ಇನ್ನು ಅನೇಕ ಸಮಾಚಾರ ಪತ್ರಿಕೆಗಳಲ್ಲೂ, ನಿಯತಕಾಲಿಕ ಗಳಲ್ಲಿಯೂ 'ಪೌಷ್ಟಿಕ ಆಹಾರ', ಪ್ರವಾಸ ಪ್ರೇಕ್ಷಣೀಯ ಸ್ಥಳಗಳು ಇತ್ಯಾದಿ ವಿಷಯಗಳ ಬಗ್ಗೆ ಲೇಖನಗಳನ್ನು ಬರೆಯಲು ಪ್ರಾರಂಭಿಸಿದರು. ಮುಂಬೈ 'ಆಕಾಶವಾಣಿ'ಯಲ್ಲಿ ಭಾಷಣಗಳನ್ನು ನೀಡಿದ್ದು ಅಲ್ಲದೆ, ಇತ್ತೀಚೆಗೆ 'ಉದಯ' ಟಿ.ವಿ.ಯಲ್ಲಿ ಮುಂಜಾನೆ ಮೂಡಿ ಬರುವ ಪರಿಚಯ ಕಾರ್ಯಕ್ರಮದ ಸಂದರ್ಶನ ಕಾರ್ಯಕ್ರಮದಲ್ಲಿ ಮಧುರಾ ಆನಂದ್ ಪಾಲ್ಗೊಂಡು ಕನ್ನಡನಾಡಿನ ಜನತೆಗೆ ಹೆಚ್ಚು ಪರಿಚಿತರಾದರು. 1999ರಲ್ಲಿ ಈವರೆಗೆ ನಮ್ಮ ನಾಡಿಗೆ ಸೀಮಿತವಾಗಿದ್ದ ಅವರ ಕಾರ್ಯಚಟುವಟಿಕೆಗಳು ವಿದೇಶಕ್ಕೆ ಹಬ್ಬಲು ಸುವರ್ಣಾವಕಾಶಗಳ ಹೆಬ್ಬಾಗಿಲು ತೆರೆದುಕೊಂಡಿತು. ಕಳೆದ ಮೇ ತಿಂಗಳಲ್ಲಿ ಆಸ್ಟ್ರೇಲಿಯ ದೇಶಕ್ಕೆ ಭೇಟಿ ನೀಡಿ, ಸಿಡ್ನಿ, ಬ್ರಿಸ್ಬೇನ್, ಅಡಿಲೈಡ್, ಕೈರನ್ಸ್ (Cairns) ಆಲೈಸ್ (Alice) ಸ್ಪ್ರಿಂಗ್ಸ್ ಮುಂತಾದೆಡೆಯೆಲ್ಲೆಲ್ಲಾ ತಮ್ಮ ಮುಂದಿನ ಯೋಜನೆಗಳ ಬಗ್ಗೆ, ವಿಚಾರ ವಿನಿಮಯ ಮಾಡಿಕೊಂಡರು. ಅನೇಕ ಉಪನ್ಯಾಸಗಳನ್ನು ನೀಡಿದರು. ಕಳೆದ ಸೆಪ್ಟೆಂಬರ್ ತಿಂಗಳು 'ಮಿಲ್ಲರ್ ಫ್ರೀಮನ್ ಏಷ್ಯ ಕಂಪನಿ' ಬರ್ಲಿನ್, (Miller Freeman Asia Company Berlin) ದೊಡ್ಡ



ವ್ಯಾಪಾರ ವಾಣಿಜ್ಯ ಉತ್ಪನ್ನಗಳ ಸಂಘಟಕರು ಎಂದು ಹೆಸರುವಾಸಿಯಾದ ಕಂಪನಿಯ ಆಹ್ವಾನದ ಮೇರೆಗೆ 'ಹಾಂಗ್‌ಕಾಂಗ್'ನಲ್ಲಿ ಏರ್ಪಡಿಸಲಾಗಿದ್ದ ಸಮ್ಮೇಳನ ''ಏಷ್ಯಾ ಅಂತರರಾಷ್ಟ್ರೀಯ ವ್ಯಾಪಾರ''ದಲ್ಲಿ ಭಾಗವಹಿಸಿದ್ದರು. ಅಷ್ಟೇ ಅಲ್ಲ ! ಬ್ರಿಟೀಶ್ ಸಾಮ್ರಾಜ್ಯವು ಚೈನಾಕ್ಕೆ 'ಹಾಂಗ್‌ಕಾಂಗ'ನ್ನು ಹಸ್ತಾಂತರಿಸಿದಾಗ ಇವರನ್ನು ಅಲ್ಲಿನ ಜನತೆಗೆ 'ವಿಶೇಷ ಅತಿಥಿ'ಯೆಂದು ಹಾಗೂ 'ಸಾಂಸ್ಕೃತಿಕ ರಾಯಭಾರಿ' ಎಂದು ಪರಿಚಯಿಸ ಲಾಯಿತು. 1999ರ, ಅಕ್ಟೋಬರ್ ತಿಂಗಳಿನಲ್ಲಿ, ದ್ವೀಪಗಳ ಗುಂಪಿಗೆ ಸೇರಿದ ಮಾಲ್ಡೀವ್ಸ್, ಹುಲ್ ಹ್ಯತಿ ಮಲೆ ರಾಜಧಾನಿ ಇಡುಪ್ಪನಿ, ಕುನ್ ಪೂಡಾದು ಮುಂತಾದ ದ್ವೀಪಗಳಿಗೆ ಪತಿಯ ಸಂಗಡ ಪ್ರವಾಸ ಕೈಗೊಂಡು ಅಲ್ಲಿನ 'ಪ್ರವಾಸೋದ್ಯಮದ ಬೆಳವಣಿಗೆ'ಯ ಬಗ್ಗೆ ವಿಶೇಷ ಆಸಕ್ತಿಯಿಂದ ಅಧ್ಯಯನ ನಡೆಸಿದ್ದಾರೆ. ಮಾಲ್ಡೀವ್ಸ್‌ನಿಂದ ಹಿಂತಿರುಗಿ ಬರುವಾಗ ''ಸೋಮಕಿರವ್ ಆಯುರ್ವೇದಿಕ್ ಬೀಚ್‌ರೆಸ್ಟೋರಾ''ಗೆ ಭೇಟಿ ನೀಡಿದಾಗ, 'ಪ್ರಕೃತಿ ಚಿಕಿತ್ಸೆ' ಪಡೆಯಲು ಪ್ರವಾಸಿರು ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬರತ್ತಾರೆಂಬ ವಿಷಯ ತಿಳಿದುಬಂದಿತು. 'ಪ್ರಕೃತಿ ' ನಿಸರ್ಗ ಪ್ರಾಕೃತಿಕ ಕೊಡುಗೆಗಳ 'ಮೌಲ್ಯ'ವನ್ನರಿತ ಆ ಜನತೆ, ನಿಸರ್ಗ ಹಾಗೂ ಪರಿಸರ ರಕ್ಷಣೆಯನ್ನು ಯಾವ ರೀತಿ ಮನಃ ಪೂರ್ವಕವಾಗಿ ಸಾರ್ವಜನಿಕವಾಗಿ ನಡೆಸುತ್ತಿದ್ದಾರೆ ಎಂಬ ಅಂಶವನ್ನು ಮಧುರಾ ಅರಿತು ಅಚ್ಚರಿಗೊಂಡರು.

ಮಾರ್ಚ್ 24ನೆಯದಿನಾಂಕ, ರಾತ್ರಿ, ಮುಂಬೈನಿಂದ ಆಸ್ಟ್ರೇಲಿಯಾಗೆ ಪ್ರಯಾಣ ಬೆಳೆಸಿದರು. ಆಸ್ಟ್ರೇಲಿಯಾದ ವಿವಿಧ ಪ್ರದೇಶ ಗಳಲ್ಲಿರುವ 'ರಾಷ್ಟ್ರೀಯ ಉದ್ಯಾನವನ ಗಳನ್ನು ನೋಡಿ 'ಪ್ರಕೃತಿ' -- 'ಪರಿಸರ'ದ ಬಗ್ಗೆ ಆಳವಾಗಿ ಅಧ್ಯಯನ ಮಾಡುವ ಉದ್ದೇಶದಿಂದ, ಆಸ್ಟ್ರೇಲಿಯಾ ಸರ್ಕಾರದ ಆಹ್ವಾನದ ಮೇರೆಗೆ ಹೋಗಿದ್ದಾರೆ.

ಪ್ರಪಂಚದ ಅತ್ಯಂತ ಹಳೆಯ ಹಾಗೂ ಹಿರಿಯ ಸಂಸ್ಥೆ ಎಂದು ಪ್ರಖ್ಯಾತಿ ಪಡೆದಿರುವ ಕಾನ್‌ಫ್ರಿ, 1248ರಲ್ಲಿ ಪ್ರಾರಂಭವಾಗಿದ್ದು ಸುಮಾರು 120 ದೇಶಗಳಿಂದ, 80 ಸಾವಿರ ಪ್ರತಿನಿಧಿಗಳನ್ನು ಹೊಂದಿರುವ 'ಗ್ಯಾಸ್‌ಸ್ಟ್ರಾನಮಿಕ್ ಆರ್ಗನೈಸೇಶನ್' (Gastronomic Organisation)ಗೆ ಮಧುರಾ ಭಾರತೀಯ ಪ್ರಥಮ ಸದಸ್ಯೆಯಾದ ಗೌರವಕ್ಕೆ ಪಾತ್ರರಾಗಿದ್ದಾರೆ. ಈ ಸಂಸ್ಥೆಯಿಂದ ಅನೇಕ ಪ್ರಶಸ್ತಿಗಳನ್ನೂ (Award) ಪಡೆದಿದ್ದಾರೆ. ನಮ್ಮೆಲ್ಲರಿಗೂ ಇದು ಹೆಮ್ಮೆಯ ವಿಷಯ. ಆಸ್ಟ್ರೇಲಿಯಾದ ಸಿಡ್ನಿಯಲ್ಲಿ ಸ್ಥಾಪಿತಗೊಂಡಿರುವ 'ಫುಡ್ ಮೀಡಿಯ ಕ್ಲಬ್'ಗೆ (Food Media Club) ಮಧುರಾ ಪ್ರಥಮ ಅಂತರ ರಾಷ್ಟ್ರೀಯ ಮಹಿಳಾ ಭಾರತೀಯ ಪ್ರತಿನಿಧಿಯಾಗಿದ್ದಾರೆ. ಮುಂದಿನ ತಿಂಗಳು ಬರ್ಮಾ, ಥೈಲಾಂಡ್, ವಿಯಟ್ನಾಂಗಳಿಗೆ ಅವರ ಆಹ್ವಾನದ ಮೇರೆಗೆ ಪ್ರವಾಸೋದ್ಯಮದ ವಿಚಾರ ವಿನಿಮಯಗಳಿಗಾಗಿ ಭೇಟಿ ನೀಡುತ್ತಿದ್ದಾರೆ. ಇಂಡೋ ಜಪಾನೀಸ್ ಸಂಸ್ಥೆಯ ಮೂಲಕ ಒಂದು ವರ್ಷದ 'ಇಕೆಬಾನ್'(ಹೂಜೋಡಣೆ ಕ್ರಮ) ತರಬೇತಿ ಪಡೆದು, 'ಇಕೆಬಾನ್' ಸಂಸ್ಥೆಯ ಅಧ್ಯಕ್ಷರಿಂದ ಪ್ರಮಾಣ ಪತ್ರ (Certificate) ಪಡೆದಿದ್ದಾರೆ. ಅವರ ಹವ್ಯಾಸಗಳು ಹತ್ತು ಹಲವಾರು!

ಎಲ್ಲೆಲ್ಲಿಯೂ 'ಮಾಹಿತಿ ತಂತ್ರಜ್ಞಾನ'ದ (Information Technology IT) ಬಗ್ಗೆ ಮಾತು ! ಇದರಿಂದಾಗಿ ವಿಶ್ವ ಸಂಕುಚಿತಗೊಂಡು, ವಿಶ್ವದ ಭೂ ಪ್ರದೇಶಗಳ ಜನತೆ ಜನಾಂಗಗಳು, ಹತ್ತಿರ ಹತ್ತಿರ ಸರಿಯುತ್ತಿರುವಾಗ ಪರಸ್ಪರ, ಸಂಸ್ಕೃತಿ, ಆಹಾರ, ಮಾತು, ನಡೆ-ನುಡಿ, ವಿಚಾರ ವ್ಯವಹಾರ ಅರಿಯುವುದು ಅತ್ಯವಶ್ಯಕ. ಅನೇಕ ದೇಶಗಳಿಗೆ ಭೇಟಿ ನೀಡಿ ''ಸಾಂಸ್ಕೃತಿಕ ರಾಯಭಾರಿ''ಯಾಗಿ ಅಲ್ಲಿನದನ್ನು ಗ್ರಹಿಸಿಕೊಂಡು, ನಮ್ಮದನ್ನು ಅಲ್ಲಿನವರಿಗೆ ತಿಳಿಯಪಡಿಸುತ್ತಿರುವ ಕಾರ್ಯ ಶ್ಲಾಘನೀಯ ! ಅವರು ಇದೇ ರೀತಿ ಮುಂದೆಯೂ ವಿದೇಶದಲ್ಲೆಲ್ಲಾ ನಮ್ಮ ವೈವಿಧ್ಯಮಯ ಸಂಸ್ಕೃತಿಯ 'ಸಾರ'ವನ್ನು ತಿಳಿಸಿ ಬರಲೆಂದು ಈ ಕಾರ್ಯದಲ್ಲಿ 'ಯಶಸ್ಸು' ಉಂಟಾಗಲೆಂದು ನಮ್ಮೆಲ್ಲರ ಹಾರೈಕೆ ! ಇದೇ ರೀತಿ ಮಧುರಾ - ಆನಂದ್‌ರವರು ಕಟ್ಟಿ ಕುಟುಂಬದಲ್ಲಿ ಮಾತ್ರವಲ್ಲದೆ, ನವಿಮುಂಬಯಿ ಕನ್ನಡ ಸಂಘವಲ್ಲದೆ ಕರ್ನಾಟಕದಲ್ಲೆಲ್ಲಾ ''ಮಾಧುರ್ಯ - ಆನಂದ '' ಹಂಚುವರೆಂದು ನಮ್ಮೆಲ್ಲರ ದೃಢ ನಂಬಿಕೆ !

# ಸುತ್ತಮುತ್ತ

## ಉದಯವಾಣಿಯ ಮುಂಬಯಿ ಆವೃತ್ತಿ ಆರಂಭ

ಕರ್ನಾಟಕದ ಸುಂದರ - ಜನಪ್ರಿಯ ದೈನಿಕ 'ಉದಯವಾಣಿ' ಆಗಸ್ಟ್ ತಿಂಗಳಿನಿಂದ ಮುಂಬಯಿ



ಉದಯವಾಣಿಯ ಆಡಳಿತ ನಿರ್ದೇಶಕ ಮತ್ತು ಪ್ರಧಾನ ಸಂಪಾದಕ ಟಿ. ಸತೀಶ್ ಯು. ಪೈಯವರು ದೀಪ ಬೆಳಗಿ ಉದಯವಾಣಿಯ ಮುಂಬಯಿ ಆವೃತ್ತಿಯನ್ನು ಉದ್ಘಾಟಿಸುತ್ತಿದ್ದಾರೆ. ಪಕ್ಕದಲ್ಲಿ ಮುಂಬಯಿ ಬ್ಯೂರೋ ಚೀಫ್ ಕೆ.ಟಿ. ವೇಣುಗೋಪಾಲ್, ಮಾರ್ಕೆಟಿಂಗ್ ಮ್ಯಾನೇಜರ್ ನಾಗೇಶ್ ಕಾಮತ್ ಮುಂತಾದವರನ್ನು ಚಿತ್ರದಲ್ಲಿ ಕಾಣಬಹುದು.

ಯಿಂದಲೇ ಮುದ್ರಿಸಲ್ಪಟ್ಟು, ಪ್ರತೀದಿನ ಬೆಳಿಗ್ಗೆ ಮಹಾನಗರ ಮತ್ತು ಉಪನಗರದ ಕನ್ನಡಿಗರಿಗೆ ದೊರೆಯಲು ಪ್ರಾರಂಭವಾಗಿದೆ.

1970ರಲ್ಲಿ ಆರಂಭಗೊಂಡು ಕರ್ನಾಟಕದ ಕರಾವಳಿಯ ಮನೆ ಮಾತಾಗಿ ರಾಜ್ಯಾದ್ಯಂತ ವ್ಯಾಪಕ ಪ್ರಸಾರ ಪಡೆದ ಉದಯವಾಣಿ ಕಳೆದ ಮೂರು ದಶಕಗಳಿಂದ ತನ್ನ ಮುದ್ರಣ - ವಿನ್ಯಾಸ ಹಾಗೂ ವೃತ್ತಿಪರತೆಗೆ ರಾಷ್ಟ್ರೀಯ ಮನ್ನಣೆ ಪಡೆದ ದೈನಿಕವಾಗಿದೆ.

ತನ್ನ ಮೊದಲ ಸಂಚಿಕೆಯಿಂದಲೇ ಮುಂಬಯಿ ಸೇರಿದಂತೆ ಮಹಾರಾಷ್ಟ್ರದಲ್ಲಿ ನೆಲೆಸಿದ ಕನ್ನಡಿಗರನ್ನು ಆಕರ್ಷಿಸಿದ್ದ ಉದಯವಾಣಿ ಇದುವರೆಗೆ ಎರಡನೇ ದಿನ ಮುಂಬಯಿ ತಲುಪಿ ವಿತರಣೆಯಾಗುತ್ತಿತ್ತು. ಇದೀಗ ಪತ್ರಿಕೆ ಇಲ್ಲಿಂದಲೇ ಮುದ್ರಣಗೊಳ್ಳುತ್ತಿರುವುದರಿಂದ ಪತ್ರಿಕೆಗಾಗಿ ಮುಂಬಯಿ ಕನ್ನಡ ಜನತೆ ಒಂದು ದಿನ ಕಾಯುವ ಪ್ರಮೇಯವಿಲ್ಲ.

ಮುಂಬಯಿ ಕನ್ನಡಿಗರ ಸುದ್ದಿ ಹಾಗೂ ಸಮಸ್ತ ಚಟುವಟಿಕೆಗಳ ವರದಿಯನ್ನು ಕರ್ನಾಟಕಕ್ಕೂ, ಕರ್ನಾಟಕದ ಸಮಗ್ರ ವಾರ್ತೆಯನ್ನು ಮುಂಬಯಿಗೂ ತಲುಪಿಸುವ ಏಕೈಕ ಪತ್ರಿಕಾ ಮಾಧ್ಯಮವಾಗಿರುವ ಉದಯವಾಣಿ ಈ ಎರಡು ಧ್ರುವಗಳ ನಡುವಣ ಅಂತರವನ್ನು ಕಡಿಮೆ ಮಾಡಿದೆ ಎನ್ನಬಹುದು. ಅನೇಕ ಬಾರಿ ಮುಂಬಯಿಯಲ್ಲಿ ವಾಸ್ತವ್ಯವಿರುವ ಕರಾವಳಿ ಕನ್ನಡಿಗರು 'ಉದಯವಾಣಿ' ಓದಿದಾಗ ಊರಿಗೆ ಹೋಗಿ ಬಂದ ಅನುಭವವಾಗುತ್ತದೆ' ಎಂದು ಪ್ರತಿಕ್ರಿಯಿಸುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಈ ಸಂದರ್ಭದಲ್ಲಿ ನೇಸರು 'ಉದಯವಾಣಿ'ಗೆ ಶುಭವನ್ನೂ ಯಶಸ್ಸನ್ನೂ ಕೋರುತ್ತದೆ.

## ಶ್ರೀ ಗುರುನಾರಾಯಣ ಸಾಹಿತ್ಯ ಪ್ರಶಸ್ತಿ - 2000

ಅಕ್ಷಯ ಪತ್ರಿಕೆಯ ಗೌರವ ಪ್ರಧಾನ ಸಂಪಾದಕ, ಲೇಖಕ ಶ್ರೀ ಎಂ. ಬಿ. ಕುಕ್ಯಾನರು ಸ್ಥಾಪಿಸಿದ ಶಾಶ್ವತ ನಿಧಿಯಿಂದ ಬಿಲ್ಲವರ ಎಸೋಸಿಯೇಶನ್, ಮುಂಬಯಿ ಇವರು ನೀಡುವ ಶ್ರೀ ಗುರುನಾರಾಯಣ ಸಾಹಿತ್ಯ ಪ್ರಶಸ್ತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ಪ್ರಶಸ್ತಿಯು ರೂ. ಹತ್ತು ಸಾವಿರ ನಗದು ಹಾಗೂ ಸ್ಮರಣಿಕೆಯನ್ನು ಒಳಗೊಂಡಿರುತ್ತದೆ.

ಪ್ರಶಸ್ತಿಯು ಮಹಾರಾಷ್ಟ್ರ ವಾಸಿ ಕನ್ನಡಿಗರಿಗೆ ಮೀಸಲಾಗಿದ್ದು, ಅಭ್ಯರ್ಥಿಗಳು ಸತತವಾಗಿ ಕಳೆದ ಕನಿಷ್ಠ ಹತ್ತು ವರ್ಷ ಮಹಾರಾಷ್ಟ್ರದಲ್ಲಿ ನೆಲೆಸಿರಬೇಕು. ಪ್ರಶಸ್ತಿಯು ಮಹಾರಾಷ್ಟ್ರ ವಾಸಿ ಕನ್ನಡ, ತುಳು, ಲೇಖಕರ ಒಂದು ದಶಕದಲ್ಲಿಯ ಒಟ್ಟು ಸಾಹಿತ್ಯ ಸಾಧನೆಗಳ ಮೇಲೆ ನಿರ್ಣಯಿಸಲ್ಪಡುತ್ತದೆ. ಸ್ಪರ್ಧೆಗೆ ಪ್ರವೇಶ ಶುಲ್ಕವಿಲ್ಲ. ಅನುವಾದಿತ ಯಾ ಸಂಪಾದಿತ ಕೃತಿಗಳನ್ನು ಗಮನಿಸಲಾಗುವುದಿಲ್ಲ. ಆಸಕ್ತ ಅಭ್ಯರ್ಥಿಗಳು ಸಾಹಿತ್ಯ ವಿವರಗಳನ್ನು ಪೂರಕ ದಾಖಲೆ ಸಹಿತ (Documentary Proof) ತಮ್ಮ ಮೂರು ಪ್ರಕಟಿತ ಸಾಹಿತ್ಯ ಕೃತಿಗಳೊಂದಿಗೆ 30-8-2000ದ ಒಳಗೆ The Billawar Association, Billawa Bhavan, Guru Narayan Marg, Anand Nagar, Santacruz (East), Mumbai-400055. ಇಲ್ಲಿಗೆ ಕಳುಹಿಸಲು ಕೋರಲಾಗಿದೆ. ಹೆಚ್ಚಿನ ವಿವರಗಳಿಗೆ ದೂರವಾಣಿ ಕ್ರಮಾಂಕ 6101569/6176404 ಇಲ್ಲಿಗೆ ಸಂಪರ್ಕಿಸಬಹುದಾಗಿದೆ.

## ಕನ್ನಡ ಪ್ರಚಾರ ಸಮಿತಿ, ಮುಂಬಯಿ

ಮುಂಬಯಿಯ ಅಗ್ರಗಣ್ಯ ಆದರ್ಶ ಕನ್ನಡ ಶಿಕ್ಷಕರಾಗಿ ನಿರಂತರ ಕನ್ನಡಕ್ಕಾಗಿ ಶ್ರಮಿಸಿದ್ದ ಬಹುಮುಖಿ ಪ್ರತಿಭಾ ಸಂಪನ್ನರಾಗಿದ್ದ ವೈ.ಜಿ. ಶೆಟ್ಟಿ ಅವರ ನಿಧನವು ಸಮಗ್ರ ಕನ್ನಡಿಗರ ಸಮುದಾಯಕ್ಕೆ ಅತೀವ ದುಃಖವನ್ನುಂಟುಮಾಡಿದೆ. ಚೆಂಬೂರು ಕರ್ನಾಟಕ ಕನ್ನಡ ಮಾಧ್ಯಮಿಕ ಶಾಲೆಯಲ್ಲಿ ಸುಮಾರು ನಾಲ್ಕು ದಶಕಗಳ ಅರ್ಥಪೂರ್ಣ ಅನುಪಮ ಸೇವೆಯನ್ನು ಸಲ್ಲಿಸಿದ್ದು ಅಧ್ಯಯನಶೀಲ ಶಿಸ್ತಿನ ಶಿಕ್ಷಕರೆಂಬ ವಿಶೇಷ ಗೌರವಕ್ಕೆ ಪಾತ್ರರಾಗಿದ್ದರು. ಸಾವಿರಾರು ವಿದ್ಯಾರ್ಥಿಗಳಿಗೆ ಅಚ್ಚುಮೆಚ್ಚಿನ ಗುರುಗಳಾಗಿ ಉತ್ತಮ ಸಾಂಸ್ಕೃತಿಕ ಸಾಹಿತ್ಯಕ ಕಾರ್ಯಕ್ರಮಗಳ ಸಂಘಟಕರಾಗಿ ವಿದ್ಯಾರ್ಥಿಗಳನ್ನು ಪಠ್ಯೇತರ ಚಟುವಟಿಕೆ ವಿಷಯಗಳಿಂದ ಜ್ಞಾನ ಸಂಪನ್ನರಾಗುವಂತೆ ಸತತ ಶ್ರಮಿಸಿದ್ದ ನಿಸ್ವಾರ್ಥ ಮೌನ ಸೇವೆಯನ್ನು ನೆನೆಯದ ವಿದ್ಯಾರ್ಥಿಗಳಿಲ್ಲ. ಬಡವಿದ್ಯಾರ್ಥಿಗಳಿಗೆ ನೆರವು ನೀಡಿ ಅವರನ್ನು ಸರಿಯಾದ ಮಾರ್ಗದರ್ಶನದಿಂದ ಗಣ್ಯ ವ್ಯಕ್ತಿಗಳನ್ನಾಗಿಸಿದ್ದ ವೈ. ಜಿ. ಶೆಟ್ಟಿ ಅವರ ನಿಧನದ ದುಃಖವನ್ನು ಸಹಿಸುವ ಶಕ್ತಿ ಅವರ ಶ್ರೀಮತಿ ಉಷಾ ಅವರಿಗೆ, ಮಗಳು ಉಮಾ ಅವರಿಗೆ, ಬಂಧು ಬಳಗಕ್ಕೆ ಲಭಿಸಲಿ ಎಂದು ಮುಂಬಯಿ ಕನ್ನಡ ಪ್ರಚಾರ ಸಮಿತಿಯ ಸಂಚಾಲಕ ಡಾ. ಸಂಜೀವ ಶೆಟ್ಟಿ ಅವರು ಶೋಕ ಸಂದೇಶದಲ್ಲಿ ತಿಳಿಸಿದ್ದಾರೆ.

ಕಾರ್ಕಳದ ನೀರೆ ಬೈಲೂರು ಶಾಲೆಯಲ್ಲಿ ಮುಂಬಯಿ ಎನ್.ಕೆ.ಇ.ಎಸ್. ಶಾಲೆಯಲ್ಲಿ, ರೂಪಾರೇಲ್ ಕಾಲೇಜಿನಲ್ಲಿ ಅಭ್ಯಾಸ ಮಾಡಿದ ವೈ. ಜಿ. ಅವರು ಪಠ್ಯ ಪುಸ್ತಕ ತಜ್ಞರಾಗಿ, ನಿತ್ಯಾನಂದ ರಾತ್ರಿ ಶಾಲೆಯ ಮುಖ್ಯೋಪಾಧ್ಯಾಯರಾಗಿ, ಬಂಟರವಾಣಿಯ ಪ್ರಧಾನ ಸಂಪಾದಕರಾಗಿ, ಪತ್ರಕರ್ತರಾಗಿ, ಪ್ರಾಮಾಣಿಕ ಸಮಾಜ ಸೇವಕರಾಗಿ, ಅನುವಾದಕರಾಗಿ, ಲೇಖಕರಾಗಿ ಮಾಡಿರುವ ಸೇವೆಗಳು ಅವರ ವ್ಯಕ್ತಿತ್ವದ ವಿವಿಧ ಮುಖಗಳಾಗಿದ್ದು ಕನ್ನಡಕ್ಕಾಗಿ ಶಿಕ್ಷಣಕ್ಕಾಗಿ ತನ್ನನ್ನು ಅರ್ಪಿಸಿಕೊಂಡಿದ್ದ ಕನ್ನಡ ಸೇನಾನಿಯಾಗಿದ್ದ ವೈ. ಜಿ. ಅವರ ನಿಧನವು

Regn. No. 040015/86
Regn. No. TECH/47-202/MBI-2000
Date of Posting : 10-8-2000

ಕನ್ನಡಲೋಕಕ್ಕೆ ತುಂಬಲಾರದ ನಷ್ಟವಾಗಿರುತ್ತದೆ. ಮುಂಬಯಿ ಬಂಟರ ಸಂಘಕ್ಕೆ ಮೂರು ದಶಕಗಳಲ್ಲಿ ಅವರು ಸಲ್ಲಿಸಿರುವ ಸೇವೆ ಚಿರಸ್ಮರಣೀಯವಾದುದು ಅನೇಕ ಕನ್ನಡ ಸಂಘಗಳ ಸದಸ್ಯರಾಗಿದ್ದರು. ಸರಳ ಸಜ್ಜನಿಕೆಯ ನೇರ ನಡೆ ನುಡಿಯ ಶಿಕ್ಷಣ ತಜ್ಞರಾಗಿದ್ದ ವೈ.ಜಿ. ಅವರಿಗೆ ದುಃಖತಪ್ತ ಶ್ರದ್ಧಾಂಜಲಿ.

**ಕರ್ನಾಟಕ ಸಂಘ, ಮುಂಬಯಿ ೬೬ನೇ ವಾರ್ಷಿಕ ಮಹಾಸಭೆ**

ಕರ್ನಾಟಕ ಸಂಘ, ಮುಂಬಯಿಯ ೬೬ನೇ ವಾರ್ಷಿಕ ಮಹಾಸಭೆಯು ಸಂಘದ ಆವರಣದಲ್ಲಿ ದಿನಾಂಕ ೨೫-೬-೨೦೦೦ ದಂದು ಅಧ್ಯಕ್ಷರಾದ ಕೆ. ಜಯರಾಮ ಆಳ್ವರ ಅಧ್ಯಕ್ಷತೆಯಲ್ಲಿ ನೆರವೇರಿತು. ಅಂದು ೭೫ ಸದಸ್ಯರು ಉಪಸ್ಥಿತರಿದ್ದರು. ಸದಸ್ಯರನ್ನು ಸಂಘದ ಗೌರವ ಕಾರ್ಯದರ್ಶಿ ಶ್ರೀ ಗಿರಿಧರ ಕಾರ್ಕಳರು ಸ್ವಾಗತಿಸಿದರು.

ಸಂಘದ 1999-2000ನೇ ಸಾಲಿನ ವಾರ್ಷಿಕ ಕಾರ್ಯ ಚಟುವಟಿಕೆಗಳ ವರದಿಯನ್ನು ಕಾರ್ಯದರ್ಶಿ ಶ್ರೀ ಗಿರಿಧರ ಕಾರ್ಕಳರು ವಾಚಿಸಿದರು. ಲೆಕ್ಕಪರಿಶೋಧಕರಿಂದ ಪರಿಶೀಲಿಸಲ್ಪಟ್ಟ, ಗತ ಆರ್ಥಿಕ ವರ್ಷದ (೧೯೯೯-೨೦೦೦) ಸಂಘದ ಆದಾಯ ವೆಚ್ಚ, ಆಸ್ತಿ, ಹೊಣೆಗಳ ವಿವರಗಳನ್ನೊಳಗೊಂಡ ವರದಿಯನ್ನು ಕೋಶಾಧಿಕಾರಿ ಶ್ರೀ ಸರಳಾಯರವರು ಮಂಡಿಸಿದರು. ವರದಿಗಳನ್ನು ಮಹಾಸಭೆಯಲ್ಲಿ ಪರಿಶೀಲಿಸಿ ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಅಧ್ಯಕ್ಷರಾದ ಕೆ. ಜಯರಾಮ ಆಳ್ವ ಮತ್ತು ಕಾರ್ಯದರ್ಶಿ ಶ್ರೀ ಗಿರಿಧರ ಕಾರ್ಕಳರವರು ಸದಸ್ಯರ ಪ್ರಶ್ನೆಗಳಿಗೆ ಸೂಕ್ತ ವಿವರಣೆಗಳನ್ನು ನೀಡಿದರು.

೨೦೦೦ - ೨೦೦೧ನೇ ಸಾಲಿನ ಲೆಕ್ಕ ಪರಿಶೋಧಕರ ನೇಮಕದ ಬಗ್ಗೆ ಚರ್ಚಿಸಿ ಸದ್ಯ ಇರುವ ಲೆಕ್ಕ ಪರಿಶೋಧಕರಾದ ಮೆ| ಅಶ್ವಜಿತ್ ಎಸೋಸಿಯೇಟ್ಸ್ ಅವರನ್ನು ಪುನಃ ಸರ್ವಾನುಮತದಿಂದ ನೇಮಕ ಮಾಡಲಾಯ್ತು. ಅಂತೆಯೇ ಆಂತರಿಕ ಪರಿಶೋಧಕರಾಗಿ ಮೆ| ಬಾಳಿಗ ಎಂಡ್ ಕೊ ಅವರನ್ನು ಪುನರಾಯ್ಕೆ ಮಾಡಲಾಯಿತು.

ಮಹಾಸಭೆಯಲ್ಲಿ ಮುಖ್ಯವಾಗಿ ೨೦೦೦-೨೦೦೧ನೇ ವಾರ್ಷಿಕ ಪದಾಧಿಕಾರಿಗಳ ಚುನಾವಣೆ, ನಿಯಮಾವಳಿ ತಿದ್ದು ಪಡಿಯ ಪ್ರಸ್ತಾಪ ಮತ್ತು 'ಕಲಾ ಭಾರತಿ' ಕಾರ್ಯಕ್ರಮಗಳ ಬಗ್ಗೆ ಚರ್ಚೆ ನಡೆಯಿತು. ಹಲವು ಸದಸ್ಯರು ಸೂಕ್ತ ಸಲಹೆಯನ್ನು ನೀಡಿ ಸಮಸ್ಯೆಯನ್ನು ಬಗೆಹರಿಸಿದರು. ಸಂಘದ ಒಳಿತಿಗಾಗಿ ಕೆಲವು ಠರಾವು ಜಾರಿಗೊಳಿಸಲಾಯಿತು. ಹಲವರು ಸಲಹೆ ಸೂಚನೆಗಳನ್ನು ನೀಡಿದರು. ೫ ಸದಸ್ಯರ ಎರಡು ಉಪಸಮಿತಿಯನ್ನು ನೇಮಕ ಮಾಡಲಾಯ್ತು. ಸಂಘದ ಪದಾಧಿಕಾರಿಗಳಾದ ಶ್ರೀ ಬಿ. ಎ. ಸನದಿ, ಶ್ರೀ ಜಿ.ಜಿ. ಮಿರ್ಜಿ, ಶ್ರೀ ಪಿ.ಜಿ. ಬುರುಡೆ, ಶ್ರೀ ಎಚ್. ಬಿ.ಎಲ್. ರಾವ್, ಶ್ರೀ ಶಿವಾನಂದ್ ಶೆಟ್ಟಿ, ಶ್ರೀ ವಾಸುದೇವ ಕಾಣೆಮಾರ್, ಶ್ರೀ ರಾಮನಾರಾಯಣ ಐತಾಳ್ ತಮ್ಮ ಅನಿಸಿಕೆಯನ್ನು ಮಂಡಿಸಿದರು. ಕಾರ್ಯಧ್ಯಕ್ಷರಾದ ಕೆ. ಅನಂತ ಸುಬ್ಬರಾವ್ ಮಹಾಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಈ ಸಂಘದ ಸರ್ವೋತ್ತಮ ಉನ್ನತಿಗಾಗಿ ನಾವೆಲ್ಲರೂ ಜೊತೆಗೂಡಿ ಸಹಕಾರ ಭಾವದಿಂದ ಕಾರ್ಯವಮಾಡೋಣ. ಈ ಮಹಾಸಭೆಯು ಒಂದು ತಾತ್ವಿಕ ನೆಲೆಯಲ್ಲಿ ಮುಕ್ತಾಯಗೊಳ್ಳುತ್ತಿದೆ ಎಂದು ತಮಗಾದ ಸಂತೋಷವನ್ನು ವ್ಯಕ್ತಪಡಿಸಿದರು.

ಗೌ. ಪ್ರ. ಕಾರ್ಯದರ್ಶಿ ಶ್ರೀ ಗಿರಿಧರ ಕಾರ್ಕಳರವರು ಧನ್ಯವಾದ ಅರ್ಪಿಸಿದರು.

**ಅಕ್ಟೋಬರ್ 11-12ರಂದು ಕಟ್ಮಂಡುವಿನ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ**

ಅಕ್ಟೋಬರ್ 11 ಮತ್ತು 12ರಂದು ನೇಪಾಳದ ರಾಜಧಾನಿ ಕಟ್ಮಂಡುವಿನಲ್ಲಿ 8ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಸಮ್ಮೇಳನ ನಡೆಸಲು ನಿರ್ಧರಿಸಲಾಗಿದೆ.

ಸಮ್ಮೇಳನದ ಸಂಚಾಲಕ ಬಾ. ಸಾಮಗ ಅವರು ಇಲ್ಲಿ ಈ ವಿಷಯವನ್ನು ಪ್ರಕಟಿಸಿದರು.

'ದೆಹಲಿ ಕನ್ನಡಿಗ' ಪತ್ರಿಕೆ ಆಶ್ರಯದಲ್ಲಿ ನಡೆಯಲಿರುವ ಈ ಸಮ್ಮೇಳನದಲ್ಲಿ ಕನ್ನಡನಾಡು, ನುಡಿ, ಸಾಹಿತ್ಯ, ಸಂಸ್ಕೃತಿ ಪುನರುತ್ಥಾನಕ್ಕೆ ಸಂಬಂಧಿಸಿದಂತೆ ವಿಚಾರ ಸಂಕಿರಣಗಳು, ಕವಿಗೋಷ್ಠಿ, ಮಹಿಳಾ ಉತ್ಸವ, ಸಂಗೀತ, ನೃತ್ಯ, ನಾಟಕ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಪುಸ್ತಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ.

ಸಮ್ಮೇಳನದಲ್ಲಿ ಕನ್ನಡ ವಿದ್ಯಾರಣ್ಯ ಪ್ರಶಸ್ತಿ, ಬಿ.ಎಂ. ಶ್ರೀ ಸಾಹಿತ್ಯ ಪ್ರಶಸ್ತಿ, ಶ್ರೇಷ್ಠ ಸಾಮಾಜಿಕ ಕಾರ್ಯಕರ್ತ ಪ್ರಶಸ್ತಿಗಳನ್ನು ನೀಡಲಾಗುವುದಲ್ಲದೆ ಗಣನೀಯ ಸೇವೆ ಸಲ್ಲಿಸಿದ ಕನ್ನಡಿಗರನ್ನು ಸನ್ಮಾನಿಸಲಾಗುವುದು.

ಭಾರತದಾದ್ಯಂತದಿಂದ ಸಾಹಿತಿಗಳು, ಕಲಾವಿದರು, ಪ್ರಾಧ್ಯಾಪಕರು, ಪತ್ರಕರ್ತರು, ಕನ್ನಡ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಸೇರಿದಂತೆ ಎರಡು ಸಾವಿರ ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಲಿರುವರೆಂದು ಸಾಮಗ ಅವರು ತಿಳಿಸಿದರು.


## MATRIMONIAL

Kannada brahmin bride smart 5'2" fair complexion post graduate working in scheduled bank requires a suitable bridegroom of Telugu muluknad or Kannada brahmin of 29-33 age, educated with well settled job.
May apply to the Box No. 02

***

Kannada brahmin bride, 5-1'' tall, wheatish complexion, educated, working requires a suitable bride groom of Kannada smartha brahmin of 29-33 age, educated with sell settled job.
May contact to the
Resi.: Phone No. : 409 43554

Dear Sir/Madam
I introduce my self, Shri Suresh Shastry, as a Purohit migrated from Bangalore to Mumbai and am at present residing at Dombivli.
I am a Kannada Brahmin from Bangalore (Karnataka) and have studied Vedas fully. I am able to perform all our normal and regular poojas, homas, as well as marriages, Upanayanam. Ceremonies and other anniversaries, I can also write horoscopes and match them and having knowledge of astrology. I am also available for performing 'APARAKRIYA' where people are very rarely available in Mumbai. I have furnished my mobile phone number as indicated above. As such I can be easily contacted whenever and wherever the need arises.
I am certain that one will be much satisfied to my chanting of mantras and performing the ceremonies according to one's family customs.
I will be happy if I am ever invited for any functions/ceremonies.

With regards

Yours sincerely,
**Suresh Shastry**
*Please contact*
Shri Suresh Shastry
No. 101-A,
Vishweshwara Mahal C.H.S.
Behind Dr. Wamade Clinic,
Old Dombivli, Dombivli (W),
Thane - 421 202
Mobile No. **9820173480**


Edited, Printed & Published by M.A.N. Prasad, On behalf of the Mysore Association, Mumbai. Tel.: 402 46 47
Printed at Aarati Art Printers, Fort, Mumbai-400 001. * 266 33 61 / 266 59 38